ಐಕ್ಯರಂಗ

(ವಾರ ಪತ್ರಿಕೆ)

ಸಂಪುಟ 5 | ಸಂಚಿಕೆ 25 | ಜೂನ್ 19, 1983 | ಬೆಲೆ 60 ಪೈಸೆ

ಪಶ್ಚಿಮಬಂಗಾಲ ಪಂಚಾಯತ್ ಚುನಾವಣೆ

ಎಡರಂಗದ ಪ್ರಚಂಡ ವಿಜಯ

ಪಶ್ಚಿಮ ಬಂಗಾಳದ ಜನತೆ ಮತ್ತೊಮ್ಮೆ ಎಡರಂಗದ ಮೇಲೆ ತಮ್ಮ ಅಪ್ರತಿಮ ವಿಶ್ವಾಸವನ್ನು ವ್ಯಕ್ತಪಡಿಸಿದೆ. ಮೇ 1982ರಲ್ಲಿ ವಿಧಾನಸಭೆ ಚುನಾವಣೆ ನಡೆದ ಹನ್ನೆರಡು ತಿಂಗಳಲ್ಲೇ, ಇದೇ ವರ್ಷ ಮೇ 31ರಂದು ಜರುಗಿದ ಮೂರು ಹಂತದ ಪಂಚಾಯತ ಚುನಾವಣೆಯಲ್ಲಿ ಎಡರಂಗ ಮತ್ತೊಮ್ಮೆ ಸಂಪೂರ್ಣ ಬಹುಮತ ಪಡೆದಿದೆ.

ಜಿಲ್ಲಾ ಪರಿಷತ್ ಮತ್ತು ಪಂಚಾಯತ್ ಸಮಿತಿಗಳಲ್ಲಿ 2/3ರಷ್ಟು ಸ್ಥಾನಗಳನ್ನೂ ಗ್ರಾಮ ಪಂಚಾಯತಿಯಲ್ಲಿ ಶೇ. 60 ಸ್ಥಾನಗಳನ್ನೂ ಎಡರಂಗ ಪಡೆದಿದೆ.

ಪಶ್ಚಿಮ ಬಂಗಾಳದ ಒಟ್ಟು 15 ಜಿಲ್ಲೆಗಳ ಪೈಕಿ 13 ಜಿಲ್ಲೆಗಳಲ್ಲಿ ಸಿ. ಪಿ. ಐ. (ಎಂ) ಪಕ್ಷ ಅತಿ ಹೆಚ್ಚಿನ ಸ್ಥಾನಗಳನ್ನು ಪಡೆದಿದೆ. ಮೂರು ಜಿಲ್ಲೆಗಳನ್ನು ಬಿಟ್ಟರೆ, ಸಿ. ಪಿ. ಐ. (ಎಂ) ಗ್ರಾಮ ಪಂಚಾಯತಿ, ಪಂಚಾಯತ್ ಸಮಿತಿ ಮತ್ತು ಜಿಲ್ಲಾ ಪರಿಷತ್ತುಗಳಲ್ಲಿ ಅತ್ಯಧಿಕ ಬಹುಮತ ಪಡೆದಿದೆ. ಬರ್‌ದ್ವಾನ್ ಜಿಲ್ಲೆಯಲ್ಲಿ 4151 ಪಂಚಾಯತ್ ಸ್ಥಾನಗಳ ಪೈಕಿ 3247 ಸ್ಥಾನಗಳನ್ನು ಎಡರಂಗ ಪಡೆದಿದೆ. 765 ಪಂಚಾಯತ್ ಸಮಿತಿ ಸ್ಥಾನಗಳಲ್ಲಿ 662 ಪಡೆದಿದೆ. ಕಾಂಗ್ರೆಗೆ 811 ಮತ್ತು 90 ದೊರೆತಿದೆ. ಎಡರಂಗದ ಪೈಕಿ ಸಿ.ಪಿ.ಐ. (ಎಂ)ಗೆ 3078 ಮತ್ತು 622 ಸಿಕ್ಕಿದೆ.

ಮಿಡನಾಪೂರ, ಬಂಕೂರ, ಹೂಗಲಿ, ಪುರೊಲಿಯಾ, ನಾಡಿಯಾ ಹೌರಾ, ಜಲಪೈಗುರಿ, ಕೂಚಬಿಹಾರ ಮೊದಲಾದ ಜಿಲ್ಲೆಗಳಲ್ಲಿ ಎಡರಂಗದ ಯಶಸ್ಸು ಪ್ರಶಂಸಾರ್ಹವಾಗಿದೆ.

ಜನರ ಆನಂದೋತ್ಸಾಹ

ಎಡರಂಗದ ವಿಜಯದಿಂದಾಗಿ ಪಶ್ಚಿಮ ಬಂಗಾಳದ ಗ್ರಾಮಾಂತರ ಪ್ರದೇಶ ವಿಜಯೋತ್ಸವದಿಂದ ತುಂಬಿ ತುಳುಕುತ್ತಿದೆ. ಗ್ರಾಮಾಂತರ ಪ್ರದೇಶದ ಎಲ್ಲ ಜನತೆ, ರೈತರು, ಕೃಷಿ ಕಾರ್ಮಿಕರು, ಮಧ್ಯಮ ವರ್ಗ, ಗುಡ್ಡಗಾಡು ಜನ, ಎಲ್ಲ ಜಾತಿಯ ಗಂಡು-ಹೆಣ್ಣು, ನೌಕರದಾರರು, ವಿದ್ಯಾರ್ಥಿಗಳು, ಶಿಕ್ಷಕರು, ಯುವಕರೆಲ್ಲ ವಿಜಯೋತ್ಸವದಲ್ಲಿ ಮಿಲಿಯಗಟ್ಟಲೆ ಪಾಲ್ಗೊಳ್ಳುತ್ತಿದ್ದಾರೆ. ಎಡರಂಗದ ಅಧ್ಯಕ್ಷರಾದ ಕಾ। ಸರೋಜ ಮುಖರ್ಜಿಯವರು ವಿನಂತಿ ಮಾಡಿಕೊಂಡಂತೆ ಅವರೆಲ್ಲ ಪ್ರಶಂಸನೀಯ ಶಿಸ್ತನ್ನು ಪಾಲಿಸುತ್ತಿದ್ದಾರೆ. ಇಂದಿರಾ ಕಾಂಗ್ರೆಸ್ಸಿನವರ ಬೆಂಬಲಿಗರಿಂದ ಎಷ್ಟು ಪ್ರಚೋದನೆಯಾದರೂ ಕೂಡ ಜನತೆ ಸಂಪೂರ್ಣ ಶಾಂತಿ ಕಾಪಾಡಿಕೊಂಡು ಹೋಗಬೇಕೆಂದು ಸಿ. ಪಿ. ಐ. (ಎಂ) ಪಶ್ಚಿಮ ಬಂಗಾಳ ಸಮಿತಿ ಪಾರ್ಟಿ ಸದಸ್ಯರಿಗೂ, ಸಹಾನುಭೂತಿದಾರರಿಗೂ, ಜನತೆಗೂ ಕರೆಕೊಟ್ಟಿದೆ.

ಕಾಂಗ್ರೆ ಆಕ್ರಮಣ

ತಮಗುಂಟಾದ ಸೋಲಿನ ನಂತರ ಹಲವಾರು ಪ್ರದೇಶಗಳಲ್ಲಿ ಗೊಂದಲ ಉಂಟುಮಾಡಲು ಕಾಂಗ್ರೆ ಸತತ ಪ್ರಯತ್ನ ನಡೆಸಿದೆ. ಮಿಡ್ನಾಪುರ, ನಾಡಿಯಾಡ, ಮಾಲ್ಡಾ ಮೊದಲಾದ ಜಿಲ್ಲೆಗಳಲ್ಲಿ ಎಡರಂಗ ಅದರಲ್ಲೂ ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಇಂದಿರಾ ಕಾಂಗ್ರೆಸ್ಸಿನ ಗುಂಡಾಜನರು ಅತ್ಯಾಚಾರ ಮುಂದುವರಿಸಿದ್ದಾರೆ. ಹಲವಾರು ಸಿಪಿಐ(ಎಂ) ಕಾರ್ಯಕರ್ತರನ್ನು ಕೊಲ್ಲಲಾಗಿದೆ, ಉಮೇದುವಾರರ ಮನೆಗಳಿಗೆ ಬೆಂಕಿ ಹಚ್ಚಲಾಗುತ್ತಿದೆ. ಕೆಲವರ ಕೈಕಾಲು ಕಡಿದಿದ್ದಾರೆ, ಮನೆಗಳನ್ನು ಲೂಟಿ ಮಾಡಿದ್ದಾರೆ, ಹೆಂಗಸರನ್ನೂ ಘಾಯಗೊಳಿಸಿದ್ದಾರೆ. ಈ ರೀತಿಯ ದಬ್ಬಾಳಿಕೆ ಮುಂದುವರಿಯುತ್ತಿದೆ.

ಶಾಂತಿಯನ್ನು ಕಾಪಾಡಬೇಕೆಂದೂ, ಅಶಾಂತಿ ಉಂಟುಮಾಡುವವರ ಒಳಸಂಚನ್ನು ಬಯಲಿಗೆಳೆಯಬೇಕೆಂದೂ ಮುಖ್ಯಮಂತ್ರಿ ಜ್ಯೋತಿಬಸು ಜನತೆಗೆ ವಿನಂತಿ ಮಾಡಿಕೊಂಡಿದ್ದಾರೆ.

ಆರಿಸಿಬಂದ ಪಂಚಾಯತಿಗಳು ಇನ್ನೂ ಹೆಚ್ಚಿಗೆ ಜನರ ಹಿತಕರ ಕಾರ್ಯಕ್ರಮಗಳನ್ನು ಸಾಧಿಸಲು ಅನುಕೂಲವಾಗುವಂತೆ, ಅವರಿಗೆ ಹೆಚ್ಚಿಗೆ ಅಧಿಕಾರ ಸಿಗುವಂತೆ ಈಗಿರುವ ಪಂಚಾಯತಿ ಕಾನೂನಿಗೆ ತಿದ್ದುಪಡಿ ಮಾಡಲಾಗುವುದೆಂದು ಪಂಚಾಯತ ಮಂತ್ರಿಗಳಾದ ಬಿನೋಯ್‌ಚೌಧರಿಯವರು ಜಾಹೀರ ಪಡಿಸಿದ್ದಾರೆ.

ಬಂಡವಾಳಶಾಹಿ ರಾಜಕೀಯ ಪಕ್ಷಗಳು ನಡೆಸುತ್ತಿರುವ ಸರಕಾರಗಳಿಗೂ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ ಪಾರ್ಟಿಯ ಮುಖಂಡತ್ವದ ಎಡರಂಗದ ಸರಕಾರಕ್ಕೂ ಇರುವ ವ್ಯತ್ಯಾಸ ಇಲ್ಲಿ ಎದ್ದು ಕಾಣುತ್ತಿದೆ. ಅಧಿಕಾರ ವಿಕೇಂದ್ರಿಕರಣಗೊಳಿಸುತ್ತೇವೆಂದು ಬರೇ ಪ್ರಚಾರದ ಸಲುವಾಗಿ ಘೋಷಿಸುತ್ತಿರುವ ಕಾಂಗ್ರೆ ಸರಕಾರ ಪಂಚಾಯತಿಗಳಿಗೆ ಹೆಚ್ಚು ಅಧಿಕಾರ ಕೊಡಲು ಹೆದರುತ್ತಿರುವಾಗ ಪ. ಬಂಗಾಲದ ಎಡರಂಗ ಸರಕಾರ ಸ್ಥಳೀಯ ಸಂಸ್ಥೆಗಳಿಗೆ ಇನ್ನೂ ಹೆಚ್ಚಿನ ಅಧಿಕಾರ ಕೊಡಲು ಮುಂದೆ ಬಂದಿರುವುದು ಅತ್ಯಂತ ಸ್ವಾಗತಾರ್ಹ.

ಎಡರಂಗವನ್ನು ಜಯಗೊಳಿಸಿದ್ದಕ್ಕಾಗಿ ಐಕ್ಯರಂಗ, ಹಾಗೆಯೇ ಕರ್ನಾಟಕ ಸಿ. ಪಿ, ಐ. (ಎಂ) ಮತ್ತು ಪ್ರಗತಿಶೀಲ ಜನತೆ ಪಶ್ಚಿಮ ಬಂಗಾಳದ ಗ್ರಾಮಾಂತರ ಪ್ರದೇಶದ ಮತದಾರರಿಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಒಟ್ಟು 55,383 ಸ್ಥಾನಗಳ ಪೈಕಿ 53,415 ಪ್ರಕಟವಾಗಿದ್ದು ಆದರ ಪೈಕಿ ಯಾವ ಪಕ್ಷಕ್ಕೆ ಎಷ್ಟು ಸ್ಥಾನ ಸಿಕ್ಕಿದೆಯೆಂಬುದನ್ನು ಇಲ್ಲಿ ಕೊಡಲಾಗಿದೆ. 400 ಸ್ಥಾನ ಅವಿರೋಧವಾಗಿ ಆರಿಸಿ ಬಂದಿದೆ.

	ಗ್ರಾಮ ಪಂಚಾಯತಿ	ಪಂಚಾಯತ್ ಸಮಿತಿ	ಜಿಲ್ಲಾ ಪರಿಷತ್	ಒಟ್ಟು
ಸಿಪಿಐ (ಎಂ)	24,162	4628	391	29,181
ಕಾಂಗ್ರೆ	12,558	2279	135	16,972
ಆರ್.ಎಸ್.ಪಿ.	1,227	205	14	1,446
ಪುರೋಗಾಮಿ ಪಕ್ಷ	1,020	185	21	1,223
ಸಿ.ಪಿ.ಐ.	708	89	—	797
ಜನತಾ ಪಾರ್ಟಿ	44	11	—	55
ಬಿ.ಜೆ.ಪಿ.	34	2	—	36
ಸ್ವತಂತ್ರರು	3.339	360	16	3705
ಒಟ್ಟು	45,092	7756	577	53,415

ಸಂಪಾದಕೀಯ :

ಚರಿತ್ರಾರ್ಹ ಘಟನೆ

ಮರೆಯಲಾರದ, ಚರಿತ್ರಾರ್ಹವಾದ, ಅತಿ ಮಹತ್ವದ ಘಟನೆ 1983 ಏಪ್ರಿಲ್ ತಿಂಗಳ ಕೊನೆಯ ವಾರದಲ್ಲಿ ಘಟಿಸಿತು. ಮನಸ್ತಾಪದಿಂದ ಸ್ಥಬ್ದಗೊಂಡಿದ್ದ ಎರಡು ಮಹಾರಾಷ್ಟ್ರಗಳ ಕಮ್ಯುನಿಸ್ಟ ಪಾರ್ಟಿಗಳೊಳಗಿನ ಸಂಬಂಧ ಪುನಃ ಸ್ಥಾಪಿಸಲಾಯಿತು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ ಪಾರ್ಟಿ ಮತ್ತು ಚೀನಾ ಕಮ್ಯೂನಿಸ್ಟ ಪಾರ್ಟಿಗಳೊಳಗಿನ ಸಂಬಂಧ ಹದಿನಾರು ವರ್ಷಗಳ ಹಿಂದೆ 1967ರಲ್ಲಿ ಕಡಿದು ಹೋಗಿತ್ತು. ಆ ಸಂಬಂಧವನ್ನು ಎಪ್ರಿಲ್ 26ರಂದು ಮತ್ತೆ ಜೋಡಿಸಲಾಯಿತು. ಕಳೆದ 3-4 ವರ್ಷಗಳಿಂದ ಈ ದಿಸೆಯಲ್ಲಿ ಪ್ರಯತ್ನ ಮುಂದುವರಿದಿತ್ತು. ಈಗ ಅದು ಫಲಿಸಿರುವುದರಿಂದ ನಮ್ಮ ಪಾರ್ಟಿ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ ಪಾರ್ಟಿಗೆ ಅತ್ಯಾನಂದವಾಗಿದೆ. ಯಾಕೆಂದರೆ, ಈ ಸಂಬಂಧ ಜೋಡಣೆ ಅಂತರಾಷ್ಟ್ರೀಯ ಕಮ್ಯೂನಿಸ್ಟ ಚಳುವಳಿಯಲ್ಲಿ ಹೊಸ ನಿಲುವೊಂದನ್ನು ಪ್ರತಿನಿಧೀಕರಿಸುತ್ತದೆ. ಹೊಸ ಮತ್ತು ವಾಸ್ತವ ಪರಿಸ್ಥಿತಿಯ ಆಧಾರದಲ್ಲಿ ಜಗತ್ತಿನ ಚಳುವಳಿಯನ್ನು ಪುನಃ ಜೋಡಿಸಿಕೊಳ್ಳಲು ಇದು ಸಹಾಯವಾಗುತ್ತಿರುವುದರಿಂದ ಇದೊಂದು ಮಹಾನ್ ಚಾರಿತ್ರಿಕ ಘಟನೆಯೆಂದು ನಾವು ಪ್ರಶಂಸೆ ಮಾಡುತ್ತೇವೆ.

ಶತಮಾನಗಳಿಂದಲೂ ಹಳೆಯದಾದ ಸಂಸ್ಕೃತಿ ಮತ್ತು ನಾಗರೀಕತೆಯನ್ನು ಹೊಂದಿದಂಥಾ, ನೂರಾರು ವರ್ಷಗಳಿಗೂ ಮೇಲ್ಪಟ್ಟು, ಸಾಮ್ರಾಜ್ಯಶಾಹಿಗಳ ಪ್ರಾಬಲ್ಯಕ್ಕೂ ಸುಲಿಗೆ ಮತ್ತು ಸಂಕಷ್ಟಗಳಿಗೂ ತುತ್ತಾಗಿ ಒಂದೇ ತರದ ದುಃಖಮಯ ಅನುಭವಗಳನ್ನು ಪಡೆದಂಥಾ ಅತಿ ಹೆಚ್ಚು ಜನಸಂಖ್ಯೆ ಇರುವ ಎರಡು ನೆರೆಕರೆಯ ವಿಶಾಲ ದೇಶಗಳ ಕಮ್ಯೂನಿಸ್ಟ ಪಾರ್ಟಿಗಳೊಳಗಿನ ಸಂಬಂಧ ಇದಾಗಿರುವುದರಿಂದ, ಇದಕ್ಕೆ ಹೆಚ್ಚಿನ ಮಹತ್ವ ಉಂಟಾಗಿದೆ. ಜಗತ್ತಿನ 400 ಕೋಟಿ ಜನಸಂಖ್ಯೆಯಲ್ಲಿ ಈ ಎರಡೂ ರಾಷ್ಟ್ರಗಳ ಜನಸಂಖ್ಯೆ 180 ಕೋಟಿ. ಕಳೆದ 20 ವರ್ಷಗಳಿಂದ ಸ್ನೇಹಮಯ ಸಂಬಂಧವಿಲ್ಲದ ಎರಡು ರಾಷ್ಟ್ರಗಳ ಎರಡು ದೇಶಗಳ ಜನರನ್ನು ಒಂದುಗೂಡಿಸುವಲ್ಲಿ ಈ ಎರಡು ಕಮ್ಯೂನಿಸ್ಟ ಪಾರ್ಟಿಗಳ ಸಂಬಂಧ ನಿಜವಾಗಿಯೂ ಸಹಾಯಕಾರಿಯಾಗುತ್ತದೆ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ ಪಾರ್ಟಿ ಸ್ಥಾಪನೆಯಾದಾಗ ಪಾರ್ಟಿ ಕೈಗೊಂಡ ಕಾರ್ಯಕ್ರಮದ ಪ್ರತಿಜ್ಞೆಯನ್ನು ಸ್ವಲ್ಪ ಮಟ್ಟಿಗಾದರೂ ಪೂರೈಸುವುದಕ್ಕೆ ಈ ಎರಡೂ ಪಾರ್ಟಿಗಳೊಳಗೆ ಐಕ್ಯತೆ ಪುನಃ ಸಾಧಿಸಿರುವುದು ಸಹಾಯಕವಾಗುತ್ತದೆಂದು ತಿಳಿದು ಸಿ. ಪಿ. ಐ. (ಎಂ)ಗೆ ಹೆಚ್ಚು ಸ್ಫೂರ್ತಿ ಬಂದಿದೆ.

"ಹೊಸ ಯುಗ ನಮಗೆ ಒದಗಿಸಿರುವ ಅವಕಾಶವನ್ನು ಪ್ರತಿಯೊಂದು ದೇಶದಲ್ಲಿ ಹಾಗೂ ಜಗತ್ತಿನಾದ್ಯಂತ ವಾಸ್ತವಾಂಶವನ್ನಾಗಿ ಪರಿವರ್ತಿಸಲು ಖಾತ್ರಿಯಾಗಿರುವ ಅಂತರಾಷ್ಟ್ರೀಯ ಕಮ್ಯೂನಿಸ್ಟ ಚಳುವಳಿಯ ಐಕ್ಯತೆಯನ್ನು ಬಲಪಡಿಸಲು ನಮ್ಮ ಪಾರ್ಟಿ ಪ್ರಯತ್ನ ಮಾಡುತ್ತದೆ" ಎಂದು 1964ರಲ್ಲಿ ಸ್ವೀಕಾರ ಮಾಡಿದ ನಮ್ಮ ಪಾರ್ಟಿಯ ಕಾರ್ಯಕ್ರಮ ಹೇಳುತ್ತದೆ.

ಈ ಕಾರಣದಿಂದಲೇ, ಭಿನ್ನಾಭಿಪ್ರಾಯಗಳಿದ್ದರೂ ಕೂಡ, ಎಲ್ಲಾ ಕಮ್ಯೂನಿಸ್ಟ ಪಾರ್ಟಿಗಳೊಡನೆ ಸ್ನೇಹಮಯ ಸಂಬಂಧ ಬೆಳಿಸಲು ಸಿದ್ಧವಾಗಿದೆಂದು ಸಿ. ಪಿ. ಐ. (ಎಂ) ಹೇಳುತ್ತ ಬಂದಿದೆ

ಇಂಥ ಅಭಿಲಾಷೆಯನ್ನು ನಾವು ಬರೇ ಪಾರ್ಟಿಕಾರ್ಯಕ್ರಮದಲ್ಲಿ ಬರೆದಿಟ್ಟಿದ್ದಷ್ಟೇ ಅಲ್ಲ. ಈ ಪ್ರತಿಜ್ಞೆಗೆ ಅಕ್ಷರಶಃ ಬದ್ಧರಾಗಿ, ಕಳೆದ 19 ವರ್ಷ ಪ್ರಯತ್ನ ನಡೆಸಿದೆವು. ಭಿನ್ನಾಭಿಪ್ರಾಯಗಳಿದ್ದರೂ ಕೂಡ, ರಶ್ಯಾ, ಚೀನಾ ಮತ್ತು ಇತರ ದೇಶಗಳ ಸಮತಾವಾದವನ್ನು ರಕ್ಷಿಸಲು ನಾವು ತಿಳುವಳಿಕೆಯಿಂದ ಹೋರಾಡಿದೆವು. ಮಾರ್ಕ್ಸ್‌ವಾದ-ಲೆನಿನ್‌ವಾದದ ಕುರಿತು ನಮ್ಮ ತಿಳುವಳಿಕೆಯನ್ನೂ, ನಮ್ಮ ದೇಶದಲ್ಲಿರುವ ವಾಸ್ತವ ವರ್ಗ ಪರಿಸ್ಥಿತಿಗೆ ಅದನ್ನು ಯಾವ ರೀತಿ ಅನುಷ್ಠಾನದಲ್ಲಿ ತರಬೇಕೆಂಬುದನ್ನೂ ರಕ್ಷಿಸುತ್ತಿರುವಾಗಲೇ, ಪಾರ್ಟಿ ಸದಸ್ಯರೊಳಗೂ, ಪಾರ್ಟಿ ಬೆಂಬಲಿಗರೊಳಗೂ ಚೀನಾ ವಿರೋಧಿ, ರಶ್ಯಾ ವಿರೋಧಿ ಭಾವನೆ ಬೆಳೆಯಲು ಅವಕಾಶ ಮಾಡಿಕೊಟ್ಟಿಲ್ಲ. ನಮ್ಮ ಈ ನಿಲುವು ನಮ್ಮ ದೇಶದ ಜನತೆ, ಪುರೋಗಾಮಿ ಕಾರ್ಮಿಕರು, ರೈತರಿಂದ ಪ್ರಶಂಸೆ ಪಡೆಯಿತು. ಹಾಗೆಯೇ ಜಗತ್ತಿನ ನಮ್ಮ ಮಿತ್ರ ಪಾರ್ಟಿಗಳಲ್ಲಿ ನಮ್ಮ ಪಾರ್ಟಿಯ ಕುರಿತು ಅಭಿಮಾನ ಬೆಳೆಸಿತು. ನಮ್ಮ ಮತ್ತು ಚೀನಾ ಪಾರ್ಟಿಗಳೊಳಗೆ ಸಾಧಿಸಲ್ಪಟ್ಟ ಈ ಸಂಬಂಧದಿಂದಾಗಿ ಜಗತ್ತಿನ ಕಮ್ಯುನಿಸ್ಟ ಚಳುವಳಿಯ ಐಕ್ಯತೆಯನ್ನು ಸಾಧಿಸುವ ನಮ್ಮ ನಿಲುಮೆಗೆ ಹೆಚ್ಚಿನ ಪ್ರೋತ್ಸಾಹ ನೀಡುವುದರಲ್ಲಿ ಸಂಶಯವಿಲ್ಲ.

(8ನೇ ಪುಟ ನೋಡಿ)

ಕೇಂದ್ರ ಸಮಿತಿಯ ನಿರ್ಣಯ:

ಅಸ್ಸಾಮ್ ಪರಿಸ್ಥಿತಿ ಕುರಿತು

ಅಸ್ಸಾಮ್ ರಾಜ್ಯದಲ್ಲಿ ಚುನಾವಣೆಯ ಸಮಯದಲ್ಲಿ ಹಾಗೂ ಅನಂತರ ನಡೆದ ನೂರಾರು ಮುಗ್ಧ ಜೀವಿಗಳ ಕಗ್ಗೊಲೆಯ ಬಗ್ಗೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕೇಂದ್ರ ಸಮಿತಿಯು ಅಸಹ್ಯ ಹಾಗೂ ರೋಷವನ್ನು ವ್ಯಕ್ತಪಡಿಸುತ್ತದೆ. ಐಕ್ಯತೆಯನ್ನು ವಿರೋಧಿಸುವ ಪ್ರತಿಗಾಮಿ ಶಕ್ತಿಗಳ ಯಾವುದಕ್ಕೂ ಹೇಸದ ರಾಜಕೀಯಕ್ಕೆ ಬಲಿಯಾದ ನೊಂದವರಿಗೆ, ಅಸ್ಸಾಮೀ ಭಾಷೆ ಮಾತನಾಡುವವರಿಗೆ ಮತ್ತು ಅಲ್ಪಸಂಖ್ಯಾತರಿಗೆ ಕೇಂದ್ರ ಸಮಿತಿಯು ಆಳವಾದ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ, ಬಂಗಾಳಿ ಭಾಷೆ ಮಾತನಾಡುವವರು, ಮುಸ್ಲಿಂ ಅಲ್ಪಸಂಖ್ಯಾತರು ಮತ್ತು ಗಿರಿಜನರು ಈ ಹಿಂಸಾಕಾಂಡದ ವಿಶೇಷ ಗುರಿಗಳಾಗಿದ್ದರು. ಈ ದೌರ್ಜನ್ಯಕ್ಕೆ ಗುರಿಯಾದವರಿಗೆ ಸಾಕಷ್ಟು ಪರಿಹಾರವನ್ನು ಕೊಡಬೇಕೆಂದು ಅವರ ಪುನರ್ವಸತಿಗಾಗಿ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದೂ ಕೇಂದ್ರ ಸಮಿತಿಯು ಕರೆಯೀಯುತ್ತದೆ. ಈಗಾಗಲೇ ಅಸ್ಸಾಮಿನ ಗಡಿದಾಟಿ ಪಶ್ಚಿಮಬಂಗಾಳ ಮತ್ತು ಇತರ ರಾಜ್ಯಗಳಿಗೆ ಹೋಗಿರುವ ಸಹಸ್ರಾರು ಬಂಗಾಳಿಗಳು, ನೇಪಾಳಿಗಳು ಮತ್ತು ಇತರರು ಮರಳಿ ಬರುವಂತೆ ಮಾಡಲು ಅಗತ್ಯವಾದ ಐಕ್ಯತೆ ಮತ್ತು ಸ್ನೇಹಪರತೆಯ ವಾತಾವರಣವನ್ನು ಉಂಟು ಮಾಡಬೇಕೆಂದು ಅದು ಎಲ್ಲರಿಗೂ ಕರೆಯೀಯುತ್ತದೆ.

ತಮ್ಮ ಜೀವದ ಹಂಗುತೊರೆದು ಅಸ್ಸಾಮಿನ ಜನರಿಗೆ ಪರಾಕ್ರಮದಿಂದ ಬೆಂಗಾವಲಾಗಿ ನಿಂತ ನಮ್ಮ ಪಕ್ಷದ ಸಂಗಾತಿಗಳು ಎಸ್. ಎಫ್. ಐ. ಸಿಐಟಿಯು, ರೈತಸಂಘ ಮತ್ತು ಡಿವೈಎಫ್ಐ ಸದಸ್ಯರ ವಿರೋಚಿತ ಪಾತ್ರವನ್ನು ಕೇಂದ್ರ ಸಮಿತಿಯು ಉತ್ಸಾಹದಿಂದ ಶ್ಲಾಘಿಸುತ್ತದೆ. ಇವರಲ್ಲಿ ಅನೇಕರು ಚಳುವಳಿಕಾರರ ಹತ್ಯಾಕಾಂಡಕ್ಕೆ ತುತ್ತಾದರು, ಮತ್ತು ಭಾರತದ ಐಕ್ಯತೆಗಾಗಿ ಹುತಾತ್ಮರಾದರು. ಕೇಂದ್ರಸಮಿತಿಯು ಇವರ ಸ್ಮರಣೆಗೆ ಶ್ರದ್ಧಾಂಜಲಿಯನ್ನರ್ಪಿಸುತ್ತದೆ.

ಚಳುವಳಿಕಾರರ ಹಿಂಸೆಯನ್ನು ಎದುರಿಸುತ್ತಲೇ ರಾಷ್ಟ್ರೀಯ ಐಕ್ಯತೆಯ ಪತಾಕೆಯನ್ನು ಎತ್ತಿಹಿಡಿದ ಸಿಪಿಐ (ಎಂ) ಮತ್ತು ಇತರ ಎಡಪಕ್ಷಗಳ ಈ ಪಕ್ಷಗಳ ಸಾಮೂಹಿಕ ಸಂಘಟನೆಗಳ, ಕಾಂಗ್ರೆಸ್ (ಎಸ್) ಮತ್ತು ಆರು ಪಕ್ಷಗಳ ಪಾತ್ರದ ಬಗ್ಗೆ ಕೇಂದ್ರ ಸಮಿತಿಯು ಬಹಳ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತದೆ.

ಅಸ್ಸಾಮಿ ಮಾತನಾಡುವವರನ್ನು ಹಾಗೂ ಅಲ್ಪಸಂಖ್ಯಾತರನ್ನು ಚಳುವಳಿಕಾರರ ಭಯೋತ್ಪಾದಕ ಹಿಂಸಾ ತಂಡಗಳ ದಾಳಿಯಿಂದ ರಕ್ಷಿಸಲು ವಿಫಲವಾದ ಕಾಂಗ್ರೆಸ್ (ಐ) ಸರ್ಕಾರವನ್ನು ಕೇಂದ್ರಸಮಿತಿಯು ಖಂಡಿಸುತ್ತದೆ. ಪ್ರತ್ಯೇಕತಾವಾದಿಗಳನ್ನು ಸೋಲಿಸಿ ದೂರ ಮಾಡಲು ಕಾಂಗ್ರೆಸ್ (ಐ) ಧುರೀಣರು ಪ್ರಜಾಸತ್ತಾತ್ಮಕ ಅಭಿಪ್ರಾಯವನ್ನು ಮೂಡಿಸಲಿಲ್ಲ. ಅವರಲ್ಲಿ ಕೆಲವರು ಕೋಮುಭಾವನೆ ಪ್ರಚೋದಿಸುವಂತಹ ಕರೆ ನೀಡಿ ಉರಿಯುತ್ತಿರುವ ಬೆಂಕಿಗೆ ತುಪ್ಪವೆರೆದರು. ರಾಜಕೀಯ ಬೆಂಬಲವನ್ನು ಸಜ್ಜುಗೊಳಿಸದೆ ತೆಗೆದುಕೊಂಡ ಆಡಳಿತಾತ್ಮಕ ಕ್ರಮಗಳು, ವಿವೇಚನೆಯಿಲ್ಲದೆ ಪೋಲಿಸ್ ಕ್ರಮಗಳಿಗೆ ಎಡೆಕೊಟ್ಟು ಚಳುವಳಿಕಾರರಿಗೆ ಸಹಾಯಕವಾದವು,

ಭಾಷಾ (ಬಂಗಾಳಿ) ಹಾಗೂ ಮತೀಯ (ಮುಸ್ಲಿಂ) ಅಲ್ಪಸಂಖ್ಯಾತ ಮುಗ್ಧ ಜೀವಿಗಳ ಕಗ್ಗೊಲೆಗೆ ಅಖಿಲ ಅಸ್ಸಾಂ ವಿದ್ಯಾರ್ಥಿಸಂಘ ಮತ್ತು ಅಖಿಲ ಆಸ್ಸಾಂ ಗಣ ಸಂಗ್ರಾಮ ಪರಿಷತ್‌ಗಳ ಮುಖಂಡರೇ ನೇರವಾಗಿ ಜವಾಬ್ದಾರರು ಎಂದು ಸಮಿತಿಯು ಆಪಾದಿಸುತ್ತದೆ. ವರ್ಷಗಟ್ಟಲೇ ನಡೆದ ವಿಷಪೂರಿತ ಪ್ರಚಾರ–ಅವರು ವಿದೇಶಿಯರು, ಅವರನ್ನು ಹೊರದಬ್ಬಬೇಕು. ಎಂಬ ಅವರ ವಿರುದ್ಧವಾದ ಪ್ರಚೋದನೆ ಹಲವೆಡೆಗಳಲ್ಲಿ ನಡೆದ ಕರಾಳ ಕಗ್ಗೊಲೆಗಳಿಗೆ ಕಾರಣವಾಯಿತು. ಅಲ್ಪ ಸಂಖ್ಯಾತರ ವಿರುದ್ಧ ನಡೆದ ಈ ದಾಳಿಗಳಲ್ಲಿ ಆರ್ಎಸ್ಎಸ್ ತನ್ನ ಮಾಮೂಲಿ ಪಾತ್ರವನ್ನು ವಹಿಸಿತು, ರೊಚ್ಚಿಗೆಬ್ಬಿಸುವ ಹಾಗೂ ದೊಂಬಿ ಎಬ್ಬಿಸುವ ಕಾರ್ಯಗಳಲ್ಲಿ ಅದರ ಸದಸ್ಯರು ಸಕ್ರಿಯವಾಗಿ ಪಾಲ್ಗೊಂಡರು. ಪ್ರತ್ಯೇಕವಾದಿ ಚಳುವಳಿಯಲ್ಲಿ ಆರ್ಎಸ್ಎಸ್ ಒಳಹೊಕ್ಕಿರುವುದರಿಂದಲೇ ಅಸ್ಸಾಂನ ಮತೀಯ ಪರಿಸ್ಥಿತಿ ಉದ್ರಿಕ್ತವಾಗಿರುವುದು.

ಸಾಮೂಹಿಕ ಕೊಲೆಗಳನ್ನು ಮುಚ್ಚಲು ಎಲ್ಲವನ್ನು ಮಾಡಿದ ಅವುಗಳಿಗೆ ಕಾರಣರಾದವರನ್ನು ಖಂಡಿಸದ ಕೆಲವು ಬಂಡವಾಳಗಾರ–ಜಮೀನ್ದಾರ ರಾಜಕೀಯ ಪಕ್ಷಗಳ ಬಿ. ಜೆ. ಪಿ. ಜನತಾ ಪಕ್ಷಗಳ ನಿರ್ದಯ ಸವಾಯ ಸಾಧಕತನವನ್ನು ಸಮಿತಿಯು ಖಂಡಿಸುತ್ತದೆ.

ಅಸ್ಸಾಂ ಚಳುವಳಿಯ ಹಿಂದೆ, ಅಸ್ಸಾಮಿನಲ್ಲಿ ನಡೆದ ಮುಗ್ಧರ ಮಾರಾಣ ಹೋಮದ ಹಿಂದೆ. ಭಾರತವನ್ನು ವಿಭಜಿಸಿ ದುರ್ಬಲಗೊಳಿಸಿ ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತಿರುವ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಸಾಮ್ರಾಜ್ಯಶಾಹಿಯ ಅಮಂಗಳ ಹಸ್ತವಿದೆ ಎಂದು ಕೇಂದ್ರಸಮಿತಿಯು ಭಾರತದ ಜನತೆಯನ್ನು ಎಚ್ಚರಿಸುತ್ತದೆ. ಭಾರತವನ್ನು ಕೋಮುವಾರಾಗಿ ಬ್ರಿಟಿಷರು ಒಮ್ಮೆ ಒಡೆದರು. ಈಗ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಸಾಮ್ರಾಜ್ಯಶಾಹಿಗಳು ಅದೇ ಆಟವನ್ನೇ ಆಡುತ್ತಿದ್ದಾರೆ. ಚಳುವಳಿಕಾರರೊಂದಿಗೆ ಅವರಿಗಿರುವ ಸಂಬಂಧವನ್ನು ಅವರ ಧನಸಹಾಯ ವಿದೇಶಗಳಲ್ಲಿ ಪ್ರಚಾರ, ಮತ್ತು ಸೈದ್ಧಾಂತಿಕ ಬೆಂಬಲಗಳು ಬಯಲು ಮಾಡಿವೆ. ಈ ಹಾನಿಕರ ವಾಸ್ತವಿಕತೆಯನ್ನು ಕಡೆಗಣಿಸುವುದೆಂದರೆ ಜನರು ತಮ್ಮ ಕಾಲ ಮೇಲೆ ತಾವೇ ಕಲ್ಲುಹಾಕಿಕೊಂಡಂತೆ.

ಚುನಾವಣೆಯಲ್ಲಿ ಸಿಕ್ಕಬಹುದಾದ ಫಲಕ್ಕೆ ಹೆದರಿ ಜನರ ಅಭಿಪ್ರಾಯ ಪಡೆಯದೆಯೇ ಇಂದಿರಾ ಸರ್ಕಾರವು ಅಸ್ಸಾಮನ್ನು ಆಳುವ ಕಾನೂನುಬದ್ಧವಾದ ಹಕ್ಕನ್ನು ಕೊಡುವ ರಾಷ್ಟ್ರಾಧ್ಯಕ್ಷರ ಆಡಳಿತವನ್ನು ಮುಂದುವರಿಸುವ ಕ್ರಮಕ್ಕೆ ಬೆಂಬಲ ಕೊಡಲು ಅಖಿಲ ಅಸ್ಸಾಂವಿದ್ಯಾರ್ಥಿ ಸಂಘ. ಮತ್ತು ಅದರ ಮಿತ್ರರು ಸಿದ್ಧವಿದ್ದರು. ಇದು ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘಕ್ಕೆ ಅಸ್ಸಾಮೀ ಮಾತನಾಡುವ ಜನರ ಏಕೈಕ ವಕ್ತಾರರ ಪಾತ್ರವನ್ನು ವಹಿಸಲು ಸಹಾಯಕವಾಗುತ್ತದೆಂದೂ ಮತ್ತು ಅದು ರಾಷ್ಟ್ರವಿರೋಧಿ, ಪ್ರತ್ಯೇಕತಾವಾದಿ ಉದ್ದೇಶಗಳಿಗೆ ರಿಯಾಯಿತಿ ಪಡೆದುಕೊಳ್ಳಬಹುದೆಂದು ಅವರು ವಿಚಾರ ಮಾಡಿದ್ದರು.

ಪ್ರಜಾಸತ್ತೆಗೆ ತಾವು ಬದ್ಧರು ಎಂದು ಯಾವಾಗಲೂ ಹೇಳುವ ಬಂಡವಾಳಗಾರ ವಿರೋಧ ಪಕ್ಷಗಳು–ಬಿ. ಜೆ. ಪಿ., ಜನತಾ ಪಕ್ಷಗಳ ನಾಯಕರು–ರಾಷ್ಟ್ರಾಧ್ಯಕ್ಷರ ಆಡಳಿತಕ್ಕೆ ಬೆಂಬಲ ಕೊಟ್ಟು ಚುನಾವಣೆಗಳನ್ನು ವಿರೋಧಿಸಿ ತಮ್ಮ ನಿರ್ಧಯ ಮನೋಭಾವವನ್ನು ಬಯಲುಗೊಳಿಸಿದರು. ತಮ್ಮ ಗುಂಪುಗಾರಿಕೆಯ ರಾಜಕೀಯಕ್ಕಾಗಿ, ತಮ್ಮ ಚಿಲ್ಲರೆ ಉದ್ದೇಶಗಳಿಗಾಗಿ, ಅವರು ಮತ ನೀಡುವ ಹಕ್ಕು ಜನತೆಯ ತೀರ್ಪು ಮತ್ತು ರಾಷ್ಟ್ರೀಯ ಐಕ್ಯತೆ ಸೇರಿದಂತೆ ಎಲ್ಲಾ ನೈತಿಕ, ರಾಜಕೀಯ ತತ್ವಗಳನ್ನು ಬಲಿ ಕೊಡಲು ಸಿದ್ಧರಿದ್ದರು.

ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘದ ಒತ್ತಾಯದ ಮೇರೆಗೆ ಚುನಾವಣೆಗಳನ್ನು ವಿರೋಧಿಸುವುದೆಂದರೆ ಜನತೆಯ ಹಕ್ಕುಗಳನ್ನು ಕ್ಷೀಣ ಮಾಡಲು ಮತ್ತು ಪ್ರಜಾತಾಂತ್ರಿಕ, ಸಂವಿಧಾನಾತ್ಮಕ ಪ್ರಕ್ರಿಯೆಯನ್ನು ತಡೆಯಲು ಚಳುವಳಿಕಾರರ ವೀಟೋವನ್ನು ಒಪ್ಪುವುದು ಎಂದರ್ಥ.

ರಾಷ್ಟ್ರಾಧ್ಯಕ್ಷರ ಆಳ್ವಿಕೆಯನ್ನು ವಿಸ್ತರಿಸುವುದನ್ನು ಸಿ. ಪಿ. ಐ. (ಎಂ) ಮತ್ತು ಇತರ ಎಡ ಪಕ್ಷಗಳು ದೃಢವಾಗಿ ವಿರೋಧಿಸಿದುದರಿಂದ ಅಸ್ಸಾಮಿನ ಜನರಿಗೆ ತಮ್ಮ ತೀರ್ಪನ್ನು ಕೊಡಲು ಅವಕಾಶ ಒದಗಿತು. ಜನತೆಯನ್ನು ಎದುರಿಸಲು ಹೆದರಿ, ಕೆಲವು ಬಂಡವಾಳಗಾರರ ವಿರೋಧ ಪಕ್ಷಗಳ ಉತ್ತೇಜನ ಪಡೆದ ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘ ಚುನಾವಣೆಗಳನ್ನು ವಿರೋಧಿಸಲು ನಿರ್ಧರಿಸಿತು. ಜನರನ್ನು ಅವರ ಪಾಡಿಗೆ ಬಿಟ್ಟರೆ ಅವರು ಮತದಾನ ಮಾಡಲು ಹೋಗುತ್ತಾರೆ. ಚುನಾವಣಾ ಬಹಿಷ್ಕಾರವು ಫಲಪ್ರದವಾಗುವುದಿಲ್ಲ ಎಂಬುದು ಅವರಿಗೆ ಗೊತ್ತಿದ್ದಿತು. ಆದ್ದರಿಂದ ಭಯೋತ್ಪಾದನೆ, ಬಾಂಬೆಸೆಯುವುದು, ಕೊಲೆಗಳು, ಮನುಷ್ಯರನ್ನು ಕದ್ದುಕೊಂಡು ಹೋಗುವುದು, ಈ ಕೃತ್ಯಗಳ ಮೂಲಕ ಬಹಿಷ್ಕಾರವನ್ನು ಬಲಾತ್ಕಾರದಿಂದ ಜ್ಯಾರಿ ಮಾಡಬೇಕಾಯಿತು. ಈ ದುಷ್ಕೃತ್ಯಗಳು ಚುನಾವಣೆಗಿಂತಲೂ ಹೆಚ್ಚು ಪ್ರಜಾಸತ್ತಾತ್ಮಕವಾದವು ಎಂದು ದೃಢಪಡಿಸಲಾಯಿತು. ನೆಲ್ಲಿಗೋಹಾಪುರಗಳಲ್ಲಿ ನಡೆದ ಕರಾಳ ಕೊಲೆಗಳು, ಗಂಡಸರು, ಹೆಂಗಸರು, ಮಕ್ಕಳ ಮುಗ್ಧ ಜೀವಿಗಳ ಹತ್ಯೆ, ಬೆಂಕಿಯಿಡುವುದು, ದಾಳಿ ಮಾಡುವುದು, ಇವೆಲ್ಲಾ ಈ ಕುಖ್ಯಾತ ಚುನಾವಣಾ ವಿರೋಧಿ ಪ್ರಚಾರದ ನೇರ ಫಲಗಳು. ವಿದೇಶಗಳಲ್ಲಿ ಪತ್ರಿಕೆಗಳಲ್ಲಿ ಪೂರ್ಣ ಪ್ರಚಾರವನ್ನು ಪಡೆದ ಈ ಕೊಲೆಗಳನ್ನು ಜಾಗತಿಕ ಪತ್ರಿಕೆಗಳಲ್ಲಿ ಮತ್ತು ಅಲಿಪ್ತ ರಾಷ್ಟ್ರಗಳ ಸಮ್ಮೇಳನದಲ್ಲಿ ಭಾರತದ ಮುಖಕ್ಕೆ ಮಸಿ ಬಳಿಯಲು ಉಪಯೋಗಿಸಲಾಯಿತು. ಶೃಂಗ ಸಮ್ಮೇಳನದಲ್ಲಿ ಈ ವಿವಾದವನ್ನು ಅಂತರರಾಷ್ಟ್ರೀಯ ವಿವಾದವನ್ನಾಗಿ ಮಾಡಲು ಈ ಜನರ ಪ್ರಯತ್ನ ಚಳವಳಿಕಾರರ ಪ್ರತ್ಯೇಕತಾವಾದಿ ಕಣ್ಣೋಟವನ್ನು ನಗ್ನವಾಗಿ ಬಯಲುಗೊಳಿಸಿತು. ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿರುವ ಈ ಚಳವಳಿಕಾರರ ಪೋಷಕರು, ಹಣ ಕೊಡುವವರು. ಮಾನವ ಹಕ್ಕುಗಳ ರಕ್ಷಣೆಯ ಹೆಸರಿನಲ್ಲಿ ಕೂಡಲೇ ಈ ಪ್ರಶ್ನೆಯನ್ನೆತ್ತಿಕೊಂಡರು. ಈ ಪ್ರತ್ಯೇಕತಾವಾದಿ ಸನ್ನಾಹಗಳಿಗೆ ಬಿ. ಜೆ. ಪಿ. ಮತ್ತು ಜನತಾ ಪಕ್ಷಗಳು ಸುಸಂಗತವಾಗಿ ಬೆಂಬಲ ಕೊಡುತ್ತಿವೆ.

ಮತೀಯ ಮತ್ತು ತಾವು ಮೇಲೆಂಬ ಉನ್ಮಾದದ ಶಕ್ತಿಗಳು ತಂಟೆ ಮಾಡದಂತೆ ತಡೆದಿರುವ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರವನ್ನು, ಎಡ ಶಕ್ತಿಗಳನ್ನು ಮತ್ತು ಜನತೆಯನ್ನು ಕೇಂದ್ರ ಸಮಿತಿಯು ಅಭಿನಂದಿಸುತ್ತದೆ. ಅಸ್ಸಾಮಿನಿಂದ ಬರುತ್ತಿದ್ದ ಹತ್ತಾರು ಸಹಸ್ರ ನಿರಾಶ್ರಿತರ ಪರಿಸ್ಥಿತಿಯು ರಾಷ್ಟ್ರೀಯ ಐಕ್ಯತೆಯ ವಿರೋಧಿ ಶಕ್ತಿಗಳಿಗೆ ಗ್ರಾಸವನ್ನೊದಗಿಸಿತು. ಆದರೆ ಎಡ ಶಕ್ತಿಗಳಿಗೆ ಅವರನ್ನು ಸೋಲಿಸಲು ಸಾಧ್ಯವಾಯಿತು.

ಚುನಾವಣೆಗಳಲ್ಲಿ ಕಾಂಗ್ರೆಸ್ (ಐ) ಗೆ ಬಹು ದೊಡ್ಡ ಬಹುಮತ ಸಿಕ್ಕಿರುವುದು ಆಳುವ ಪಕ್ಷವನ್ನು ಅಪಹಾಸ್ಯಕ್ಕೆ ಗುರಿಮಾಡಿದೆ. ಅ. ಅ. ವಿ. ಸಂಘದ ಹಿಂಸಾ ಕಾಂಡವು ಸಿ. ಪಿ. ಐ. (ಎಂ) ಮತ್ತು ಎಡ ಪಕ್ಷಗಳ ವಿರುದ್ಧ ನಿರ್ದೇಶಿತವಾಗಿದ್ದು ಸಾಕಷ್ಟು ರಕ್ಷಣೆಯನ್ನು ಕೊಡಲು ಕಾಂಗ್ರೆಸ್ (ಐ) ನಿರಾಕರಿಸಿದ್ದು ಎಡ ಶಕ್ತಿಗಳನ್ನು ಪರಾಜಯಗೊಳಿಸಿತು. ಅಮೇರಿಕದ ಸಂಯುಕ್ತ ಸಂಸ್ಥಾನಗಳ ಏಜೆನ್ಸಿಗಳು, ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘ, ಬಿ. ಜೆ. ಪಿ. ಯಂತಹ ಪಕ್ಷಗಳು ಮತ್ತು ಆಳುವ ಪಕ್ಷ–ಇವೆಲ್ಲವೂ ಬಯಸಿದ್ದು ಈ ಪರಿಣಾಮವನ್ನು.

ಈ ಚುನಾವಣೆಗಳಲ್ಲಿ ಪ್ರತ್ಯೇಕತಾವಾದಿಗಳಿಗೂ ಮುಖಭಂಗವಾಯಿತು. ಜನರು ತಾವಾಗಿಯೇ ಸ್ವಯಂ ಪ್ರೇರಣೆಯಿಂದ ಚುನಾವಣೆಗಳನ್ನು ಬಹಿಷ್ಕರಿಸಲಿಲ್ಲವೆಂಬುದನ್ನು ನಡೆದ ಹಿಂಸಾತ್ಮಕ ಹಲ್ಲೆಗಳು, ಗೂಂಡಾಗಿರಿಗಳು ತೋರಿಸಿದುವು.

ಚುನಾವಣಾ ಕ್ರಿಯಾಸರಣಿಯು ಔಪಚಾರಿಕವಾಗಿ ಮುಕ್ತಾಯವಾದುದು ಪ್ರತ್ಯೇಕತಾವಾದಿಗಳಿಗೆ ದಿಕ್ಕು ತೋಚದಂತೆ ಮಾಡಿದೆ. ಮತದಾರರ ಪಟ್ಟಿಗಳ ಪರಿಷ್ಕರಣ ಮಾಡಬೇಕೆಂಬ ಬೇಡಿಕೆ, ಈ ಬೇಡಿಕೆಯನ್ನಾಧರಿಸಿದ ಚಳುವಳಿ, ಸ್ವಲ್ಪ ಮಟ್ಟಿಗೆ ತಮ್ಮ ಪ್ರಸಂಗೌಚಿತ್ಯವನ್ನು ಕಳೆದುಕೊಂಡಿವೆ. ಅಮಾನುಷ ನರಹತ್ಯೆಯು ಅಲ್ಪಸಂಖ್ಯಾತರನ್ನು ಹೊಡೆದೆಬ್ಬಿಸಿ ದಬ್ಬಾಳಿಕೆಯ ವಿರುದ್ಧ ಕ್ಷಾತ್ರಶೀಲವಾಗಿ ಎದ್ದು ನಿಲ್ಲುವಂತೆ ಮಾಡಿ ಚಳುವಳಿಕಾರರಿಗೇನೇ ತಿರುಗುಬಾಣವಾಗಿದೆ. ದಿನನಿತ್ಯ ಬಂದ್‌ಗಳು, ಅಸಹಕಾರ, ಲಕ್ಷಾಂತರ ಜನರ ಜೀವನೋಪಾಯವನ್ನು ನಷ್ಟಮಾಡಿ ಜನರಲ್ಲಿ ಆಯಾಸದ ಭಾವನೆಯನ್ನು ಸೃಷ್ಟಿಸಿ ಮುಖಂಡರನ್ನು ಜನರಿಂದ ದೂರ ಮಾಡಿದೆ.

ಜನತೆಯ ಆವೇಶವನ್ನು ಉಳಿಸಿಕೊಳ್ಳಲು ಸಾಧ್ಯವಾಗದೆ ಪ್ರತ್ಯೇಕತಾವಾದಿಗಳು ತಾತ್ಕಾಲಿಕವಾಗಿ ಚಳುವಳಿಯನ್ನು ಹಿಂತೆಗೆದುಕೊಳ್ಳಲು ತೀರ್ಮಾನಿಸಿದ್ದಾರೆ. ಆದರೆ ಇದು ಸಂಪೂರ್ಣ ಸತ್ಯವಲ್ಲ. ಈಗ ಅವರು ಹಿಂಸಾಚಾರವನ್ನು ಹರಡಲು ತರಪೇತು ಹೊಂದಿದ ತಂಡೆಗಳನ್ನು ಅವಲಂಬಿಸಲೆಳಸಿದ್ದಾರೆ. ದೇಶದ ಹೊರಗಿನಿಂದ ಸರಬರಾಜಾಗುವ ಶಸ್ತ್ರಾಸ್ತ್ರಗಳಿಂದ ಸಶಸ್ತ್ರ ದಂಗೆಯನ್ನು ಸಂಘಟಿಸಲು ಹೊರಟಿದ್ದಾರೆ. ಇದು ದೇಶಕ್ಕೆ ಕಷ್ಟಕಾಲವಾಗಿದೆ.

ಭಾರತ ಐಕ್ಯತೆಯ ಮೇಲೆ ನಡೆಯುವ ಸಶಸ್ತ್ರ ದಾಳಿಯನ್ನು ಹಿಮ್ಮೆಟ್ಟಿಸಬೇಕು. ಆಡಳಿತಾತ್ಮಕ ಕ್ರಮಗಳ ಆಧಾರದ ಮೇಲೆ ಸರ್ಕಾರಕ್ಕೆ ಇದನ್ನು ತಡೆಯಲು ಸಾಧ್ಯವಾಗುವುದಿಲ್ಲ. ಅಸ್ಸಾಮಿನ ಜನರನ್ನು ಅಣಿನೆರೆಸದೆ–ಅಸ್ಸಾಮೀ ಭಾಷೆಯಾಡುವವರನ್ನು, ಅಲ್ಪ ಸಂಖ್ಯಾತರನ್ನು ದೇಶದ ಐಕ್ಯತೆಯನ್ನು ರಕ್ಷಿಸಲು ಹುರಿದುಂಬಿಸದೆ ಈ ಕಾಳಗವನ್ನು ಗೆಲ್ಲಲು ಸಾಧ್ಯವಿಲ್ಲ. ಆದರೆ ಅಸ್ಸಾಮಿನಲ್ಲಿ ಐಕ್ಯತೆಯ ಪರವಾಗಿರುವ ಪ್ರಜಾಪ್ರಭುತ್ವ ಶಕ್ತಿಗಳು ಸಾಕಷ್ಟಿವೆ. ಇವುಗಳನ್ನು ಸರಿಯಾಗಿ ಸಜ್ಜುಗೊಳಿಸಿದರೆ ಪ್ರತ್ಯೇಕತಾವಾದಿ ದಂಗೆಗೆ ಪರಿಣಾಮಕಾರಿ ಉತ್ತರವನ್ನು ಕೊಡಬಲ್ಲುವು. ಈ ಕಾರ್ಯದಲ್ಲಿ ಸಿ. ಪಿ. ಐ. (ಎಂ) ಎಡ ಪಕ್ಷಗಳು ಅಸ್ಸಾಮಿನಲ್ಲಿರುವ ಪ್ರಜಾಪ್ರಭುತ್ವ ಶಕ್ತಿಗಳು, ಕಾಂಗ್ರೆಸ್ (ಎಸ್)ನಂತಹ ಇತರ ಪಕ್ಷಗಳು ಪ್ರಮುಖ ಪಾತ್ರವನ್ನು ವಹಿಸಬೇಕಾಗಿದೆ.

ಅಸ್ಸಾಮಿನಲ್ಲಿ ನಡೆಯುತ್ತಿರುವುದೇನು, ಅಲ್ಲಿ ಪಣವಾಪಾಗಿರುವುದು ಯಾವುದು ಎಂಬುದನ್ನು ಜನರಿಗೆ ತಿಳಿಸಿ ಜಾಗೃತಗೊಳಿಸಲು, ಪ್ರತ್ಯೇಕತಾವಾದಿ ಚಳುವಳಿಕಾರರ ಹಿಂಸೆ, ಹಲ್ಲೆ, ದಬ್ಬಾಳಿಕೆಗಳನ್ನು ಧೈರ್ಯದಿಂದ ಪ್ರತಿರೋಧಿಸುತ್ತಿರುವ ಅಸ್ಸಾಮಿನ ಎಡ ಮತ್ತು ಪ್ರಜಾ ಪ್ರಭುತ್ವ ಶಕ್ತಿಗಳಿಗೆ ಎಲ್ಲ ರೀತಿಯ ಬೆಂಬಲ ಕೊಡಲು ದೇಶಾದ್ಯಂತವಿರುವ ಪಕ್ಷದ ಎಲ್ಲಾ ಘಟಕಗಳು ಇತರ ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೊಂದಿಗೆ ಕೂಡಿ ಶಕ್ತಿಯುತವಾದ ಆಂದೋಳನವನ್ನು ಸಂಘಟಿಸಬೇಕೆಂದು ಕೇಂದ್ರ ಸಮಿತಿಯು ಕರೆ ಕೊಡುತ್ತದೆ.

ಪೊಲಿಟ್‌ಬ್ಯೂರೋ ಪ್ರಕಟನೆ

ಉತ್ತರ ಕೊರಿಯ ಭೇಟಿ ಕುರಿತು

ಸಿ. ಪಿ. ಐ. (ಎಂ) ನ ಮೂರು ಸದಸ್ಯರ ನಿಯೋಗ ಕೊರಿಯಾ ಜನವಾದಿ ಜನತಾ ಗಣತಂತ್ರ(DPRK)ಕ್ಕೆ ನೀಡಿದ ಭೇಟಿಯ ಕುರಿತು ಕೇಂದ್ರ ಸಮಿತಿ ಮೇ 21 ರಂದು ಈ ಕೆಳಗಿನ ಪತ್ರಿಕಾ ಪ್ರಕಟಣೆ ನೀಡಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮೂವರು ಸದಸ್ಯರನ್ನೊಳಗೊಂಡ ನಿಯೋಗಕ್ಕೆ ಕೊರಿಯಾ ಜನವಾದಿಜನತಾಗಣತಂತ್ರ(DPRK)ಕ್ಕೆ ಭೇಟಿ ನೀಡಿ ಎರಡು ಸೋದರ ಪಕ್ಷಗಳ ನಡುವೆ ದೀರ್ಘಕಾಲದಿಂದ ಸ್ಥಾಪಿತಗೊಂಡಿರುವ ಸೋದರ ಸಂಬಂಧಗಳನ್ನು ಮತ್ತಷ್ಟು ಬಲಗೊಳಿಸಲು ನೀಡಿದ ಆಹ್ವಾನಕ್ಕಾಗಿ ಕೊರಿಯಾ ಕಾರ್ಮಿಕ ಪಕ್ಷದ ಕೇಂದ್ರ ಸಮಿತಿಗೆ ಸಿ.ಪಿ.ಐ (ಎಂ)ನ ಪಾಲಿಟ್‌ಬ್ಯೂರೋ ಧನ್ಯವಾದ ವ್ಯಕ್ತಪಡಿಸುತ್ತದೆ. ಈ ನಿಯೋಗ DPRK ನಲ್ಲಿ ನಾಲ್ಕು ದಿನಗಳನ್ನು ಕಳೆಯಿತು. ಈ ಅವಧಿಯಲ್ಲಿ ಅದು ಕೊರಿಯಾ ಕಾರ್ಮಿಕ ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯ ಹಾಗೂ DPRKದ ಉಪಾಧ್ಯಕ್ಷ ಕಾಂ। ಪಾಕ್ ಸೊಂಗ್ ಚೊಲ್‌ರವರ ನೇತೃತ್ವದ ಆ ಪಕ್ಷದ ನಿಯೋಗದೊಂದಿಗೆ ವ್ಯಾಪಕ ಮಾತುಕತೆ ನಡೆಸಿತು. ಕೊರಿಯಾ ಕಾರ್ಮಿಕ ಪಕ್ಷದ ಪ್ರಧಾನ ಕಾರ್ಯದರ್ಶಿ ಹಾಗೂ DPRKದ ಅಧ್ಯಕ್ಷ ಕಾಂ. ಕಿಮ್ ಇಲ್ ಸುಂಗ್‌ರವರೊಂದಿಗೆ ನಿಯೋಗ ಮಾತುಕತೆ ನಡೆಸಿತು.

ಈ ಹಿಂದೆ ಕಾಂ. ಸುಂದರಯ್ಯನವರ ನೇತೃತ್ವದ ನಿಯೋಗದ ಇತರ ಎರಡು ಸದಸ್ಯರು ಹಾಗೂ ತಾನು DPRKಗೆ ನೀಡಿದ ಭೇಟಿಯನ್ನು ಈ ಸಲದ ನಿಯೋಗದ ನಾಯಕ ಪ್ರಧಾನ ಕಾರ್ಯದರ್ಶಿ ಕಾಂ। ಇ.ಎಂ.ಎಸ್. ನಂಬೂದಿರಿಪಾಡ್ ನೆನಪಿಸಿಕೊಂಡರು. ಆಗ ಕಾಂ। ಕಿಮ್ ಇಲ್ ಸುಂಗರ ನೇತೃತ್ವದ ಕೇಂದ್ರ ಸಮಿತಿಯ ನಾಯಕತ್ವದಲ್ಲಿ DPRK ದೇಶ ಸಮಾಜವಾದೀ ರಚನೆಯಲ್ಲಿ ಸಾಧಿಸಿದ ಗಮನಾರ್ಹ ಪ್ರಗತಿಯನ್ನು ಹದಿನೈದು ದಿನಗಳ ಕಾಲ ಕಣ್ಣಾರೆ ಕಾಣುವ ಅವಕಾಶ ಸಿಕ್ಕಿತ್ತು. ದೇಶವನ್ನು ವಿಭಜಿಸಿ ಇಟ್ಟಿರುವ ಅಮೇರಿಕನ್ ಸೇನೆಗಳನ್ನು DPRK ಜನತೆ ಎದುರಿಸಿ ನಿಂತಿರುವ ಜಾಗ ಪಾನ್‌ಮೂನ್ ಜಂಗ್‌ಗೆ ಭೇಟಿಕೊಡುವ ಅವಕಾಶವೂ ಆ ನಿಯೋಗಕ್ಕೆ ದೊರಕಿತ್ತು. ಅಂದಿನಿಂದ ಸಿ.ಪಿ.ಐ. (ಎಂ) ಭಾರತದ ಜನತೆಯ ಮಧ್ಯೆ ಕೊರಿಯಾ ಜನತೆ ತಮ್ಮ ದೇಶದ ಸಮಾಜವಾದೀ ರಚನೆಯಲ್ಲಿ ಸಾಧಿಸಿದ ಗಮನಾರ್ಹ ಪ್ರಗತಿಯನ್ನು ಜನಪ್ರಿಯಗೊಳಿಸಲು ಪ್ರಯತ್ನಿಸುತ್ತಿದೆ; ದೇಶದ ಸ್ವತಂತ್ರ ಹಾಗೂ ಶಾಂತಿಯುತ ಏಕೀಕರಣಕ್ಕಾಗಿ ನಡೆಸುತ್ತಿರುವ ಹೋರಾಟದಲ್ಲಿ DPRKನ ಜನತೆ, ಸರಕಾರ ಹಾಗೂ ಪಕ್ಷ ಭಾರತೀಯ ಜನತೆಯ ಬೆಂಬಲ ಸಂಘಟಿಸಲು ತನ್ನ ಕೈಲಾದ ಪ್ರಯತ್ನಗಳನ್ನೆಲ್ಲಾ ಮಾಡುತ್ತಿದೆ. ಕಾಂ। ಇ. ಎಂ. ಎಸ್. ಆ ಮೇಲೂ ಹಲವು ಸಿ. ಪಿ. ಐ. (ಎಂ) ನಿಯೋಗಗಳು ಡಿ.ಪಿ.ಆರ್.ಕೆ.ಗೆ ಭೇಟಿ ನೀಡಿದುದನ್ನು ಜ್ಞಾಪಿಸಿಕೊಂಡರು. 1980ರಲ್ಲಿ ಕೊರಿಯಾ ಕಾರ್ಮಿಕ ಪಕ್ಷದ 6ನೇ ಅಧಿವೇಶನದಲ್ಲೂ ಸಿ. ಪಿ. ಐ. (ಎಂ)ನ ಸೋದರ ನಿಯೋಗ ಭಾಗವಹಿಸಿತ್ತು. ಎರಡೂ ಪಕ್ಷಗಳು ಅಮೆರಿಕನ್ ಸಾಮ್ರಾಜ್ಯಶಾಹಿಯ ಅಪಾಯವನ್ನು ಎದುರಿಸಬೇಕಾಗಿದೆ. ಏಷ್ಯಾದಲ್ಲಿ ಅದಕ್ಕೆ ಜಪಾನೀ ಸಾಮ್ರಾಜ್ಯಶಾಹಿಯ ನೆರವೂ ಇದೆ. ಕೊರಿಯಾ ಜನತೆ ಹಾಗೂ ಕಾರ್ಮಿಕ ಪಕ್ಷಕ್ಕೆ ಬೆಂಬಲವಾಗಿ ಸಿ.ಪಿ.ಐ. (ಎಂ) ತನ್ನ ಚಟುವಟಿಕೆಗಳನ್ನು ಮುಂದುವರಿಸುವುದೆಂದು ಕಾಂ। ಇ.ಎಂ.ಎಸ್. ಕೊರಿಯಾ ಕಾಮ್ರೇಡ್‌ಗಳಿಗೆ ಭರವಸೆಯಿತ್ತರು.

ಸಿ.ಪಿ.ಐ (ಎಂ)ನ ಬೆಂಬಲಕ್ಕಾಗಿ ಧನ್ಯವಾದವನ್ನರ್ಪಿಸುತ್ತಾ ಕೊರಿಯಾ ಕಾರ್ಮಿಕ ಪಕ್ಷದ ನಿಯೋಗದ ನಾಯಕ ಕಾಂ. ಪಾಕ್‌ಸೊಂಗ್ ಜೊಲ್‌ರವರು ತನ್ನ ಪಕ್ಷ "ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಆಂತರಿಕ ಹಾಗೂ ಬಾಹ್ಯ ಚಟುವಟಿಕೆಗಳನ್ನು ಆಳವಾದ ಆಸಕ್ತಿಯಿಂದ ಗಮನಿಸುತ್ತಿದೆ ಹಾಗೂ ಅದಕ್ಕೇ ತನ್ನ ದೃಢ ಬೆಂಬಲ ವ್ಯಕ್ತಪಡಿಸುತ್ತದೆ" ಎಂದು ಸಿ.ಪಿ.ಐ (ಎಂ) ನಿಯೋಗಕ್ಕೆ ತಿಳಿಸಿದರು.

ಮುಂದುವರಿದು ಅವರು "ಆರಂಭದಿಂದ ನಿಮ್ಮ ಪಕ್ಷ ಸ್ವತಂತ್ರ ನಿಲುವು ತಳೆದು ಭಾರತದ ವಾಸ್ತವ ಸನ್ನಿವೇಶಕ್ಕೆ ಅನುಗುಣವಾಗಿ ಧೋರಣೆಗಳನ್ನು, ನಿಲುವುಗಳನ್ನು ರೂಪಿಸಿಕೊಂಡು ಅದನ್ನು ಸಾಧಿಸಲು ತುಂಬಾ ಕಷ್ಟಪಟ್ಟಿದೆ. ಈ ದಿಸೆಯಲ್ಲಿ ಅದು ಹಲವು ಗೆಲುವುಗಳನ್ನು ಸಾಧಿಸಿದೆ. ಅಮೂಲ್ಯ ಅನುಭವಗಳನ್ನು ಗಳಿಸಿಕೊಂಡಿದೆ. ಈಗ ನಿಮ್ಮ ಪಕ್ಷ ಭಾರತದ ಎಲ್ಲಾ ಪ್ರಗತಿಪರ ಶಕ್ತಿಗಳ ಜತೆಗೆ ಭಾರತದ ಸ್ವತಂತ್ರ ಅಭಿವೃದ್ಧಿಗೆ, ಸಮಾಜದ ಪ್ರಜಾಪ್ರಭುತ್ವೀಕರಣಕ್ಕೆ ಮತ್ತು ದುಡಿಯುವ ಜನತೆಯ ಹಿತಾಸಕ್ತಿಗಳ ರಕ್ಷಣೆಗೆ ಅಮೂಲ್ಯ ಕೊಡುಗೆಗಳನ್ನು ನೀಡುತ್ತಿದೆ. ಪರಿಣಾಮವಾಗಿ, ಈಗ ನಿಮ್ಮ ಪಕ್ಷ ಭಾರತದ ಸಮಾಜದಲ್ಲಿ ಪ್ರಭಾವಶಾಲೀ ರಾಜಕೀಯ ಶಕ್ತಿಯಾಗಿ ಬೆಳೆದು ಬಂದಿದೆ ಹಾಗೂ ಕಾರ್ಮಿಕ ವರ್ಗದ ಮುಂದಾಳಾಗಿ ಬಲಗೊಂಡು ಅಭಿವೃದ್ಧಿ ಹೊಂದಿ ಭಾರತೀಯ ಜನತೆಯ ಪೂರ್ಣ ಬೆಂಬಲಗಳಿಸಿದೆ'' ಎಂದರು.

ತನ್ನ ಕಾರ್ಯಕ್ರಮ ಹಾಗೂ ತಕ್ಷಣದ ಉದ್ದೇಶಗಳನ್ನು ಸಾಧಿಸುವಲ್ಲಿನ ಮುಂದಿನ ಚಟುವಟಿಕೆಗಳಲ್ಲಿ ಸಿ. ಪಿ. ಐ. (ಎಂ)ಗೆ ಹೊಸ ಹೊಸ ಗೆಲುವುಗಳು ಸೇರಲೆಂದು ಹಾರೈಸುತ್ತಾ ಕಾ। ಪಾಕ್‌ಸೊಂಗ್‌ಚೊಲ್ "ನಮ್ಮ ಕಾಲದ ಕ್ರಾಂತಿಕಾರಿ ಕಾರ್ಯ ನಿರ್ವಹಣೆಯ ಪ್ರಕಾರ ಪ್ರತಿಯೊಂದು ಪಕ್ಷ ತನ್ನ ದೇಶದ ವಾಸ್ತವತೆಗಳಿಗನುಗುಣವಾಗಿ ಮಾರ್ಕ್ಸ್‌ವಾದ–ಲೆನಿನ್ ವಾದವನ್ನು ಕ್ರಿಯಾತ್ಮಕವಾಗಿ ಅನ್ವಯಿಸಬೇಕು ಹಾಗೂ ಕ್ರಾಂತಿ ಹಾಗೂ ರಚನೆಯಲ್ಲಿ ಉಂಟಾಗುವ ಎಲ್ಲಾ ಸಮಸ್ಯೆಗಳನ್ನು ಸ್ವತಂತ್ರವಾಗಿ ಪರಿಹರಿಸಬೇಕು'' ಎಂದು ಹೇಳಿದರು.

DPRKನ ಪರಿಸ್ಥಿತಿಗಳನ್ನು ವಿವರಿಸುತ್ತಾ ಅವರು ಹೀಗೆಂದರು— "ನಮ್ಮ ದೇಶ ಈಗ ಆಧುನಿಕ ಕೈಗಾರಿಕೆ ಹಾಗೂ ಅಭಿವೃದ್ಧಿ ಹೊಂದಿದ ಗ್ರಾಮೀಣ ಆರ್ಥಿಕತೆ, ಒಂದು ಉತ್ತಮ ರಾಷ್ಟ್ರೀಯ ಸಂಸ್ಕೃತಿ ಹಾಗೂ ಶಕ್ತಿಶಾಲಿ ಸ್ವಾವಲಂಬಿ ರಕ್ಷಣಾ ವ್ಯವಸ್ಥೆಯ ಮೂಲಕ ಒಂದು ಸ್ವತಂತ್ರ ಸಮಾಜವಾದಿ ದೇಶವಾಗಿ ಪರಿವರ್ತನೆಗೊಂಡಿದೆ. ಈಗ ನಮ್ಮ ಜನರಲ್ಲಿ ಸಮಾಜವಾದೀ ರಚನೆಯ ಎಲ್ಲಾ ರಂಗಗಳಲ್ಲೂ ಹೊಸ ಉತ್ಸಾಹ ಮೂಡಿ ನಮ್ಮ ಗಣತಂತ್ರದ ಉತ್ತರ ಭಾಗದಲ್ಲಿ ಸಮಾಜವಾದ ಸಂಪೂರ್ಣ ವಿಜಯ ಪಡೆಯುವಂತಾಗಿದೆ ಹಾಗೂ ಪಿತೃಭೂಮಿಯ ಸ್ವತಂತ್ರ ಹಾಗೂ ಶಾಂತಿಯುತ ಪುನರೇಕೀಕರಣ ಸಾಧಿಸಲು ಅನುವಾದಂತಾಗಿದೆ''. ಅವರು "ನಮ್ಮ ಜನತೆಗೆ ತನ್ನ ಕ್ರಾಂತಿಕಾರೀ ಧ್ಯೇಯದಲ್ಲಿ ಸತತ ಹಾಗೂ ಸಕ್ರಿಯ ಬೆಂಬಲ ನೀಡುತ್ತಿರುವುದಕ್ಕಾಗಿ'' ಸಿ. ಪಿ. ಐ. (ಎಂ)ಗೆ ತನ್ನ ಪಕ್ಷದ ಕೃತಜ್ಞತೆ ವ್ಯಕ್ತಪಡಿಸಿದರು.

ಅಂತರ್ರಾಷ್ಟ್ರೀಯ ಪರಿಸ್ಥಿತಿಗಳ ಬಗ್ಗೆ ಗಮನ ತಿರುಗಿಸುತ್ತಾ ಕಾಂ। ಪಾಕ್ ಸೊಂಗ್‌ಚೊಲ್ "ಸಾಮ್ರಾಜ್ಯಶಾಹಿಗಳ ಆಕ್ರಮಣ ಹಾಗೂ ಯುದ್ಧ ಧೋರಣೆಗಳನ್ನು ವಿಫಲಗೊಳಿಸಲು ಹಾಗೂ ಜಗತ್ತಿನಲ್ಲಿ ಶಾಂತಿ ಹಾಗೂ ಸುಭದ್ರತೆ ನೆಲೆಸುವಂತೆ ಮಾಡಲು ಐಕ್ಯ ಭಾವದಿಂದ ಸತತ ಕ್ರಮ ಕೈಗೊಳ್ಳಬೇಕಾದುದು ಕಮ್ಯೂನಿಸ್ಟ್ ಹಾಗೂ ಕಾರ್ಮಿಕ ಪಕ್ಷಗಳ ದೃಷ್ಟಿಯಿಂದ ಅತೀ ಮಹತ್ವದ್ದು. ಎಲ್ಲಾ ಕಮ್ಯೂನಿಸ್ಟ್ ಹಾಗೂ ಕಾರ್ಮಿಕ ಪಕ್ಷಗಳು ಉಳಿದೆಲ್ಲಕ್ಕಿಂತ ಹೆಚ್ಚಾಗಿ ಐಕ್ಯತೆಗೆ ಪ್ರಥಮ ಸ್ಥಾನ ನೀಡಿ, ಭಿನ್ನಾಭಿಪ್ರಾಯಗಳನ್ನು ಬದಿಗಿರಿಸಿ ಐಕ್ಯತೆಯ ಸಮಾನಾಂಶಗಳನ್ನು ಕಂಡುಕೊಳ್ಳಬೇಕೆಂದು ನಾವು ಬಯಸುತ್ತೇವೆ. ವಿಶೇಷವಾಗಿ, ನಮಗೆ ಭೌಗೋಳಿಕವಾಗಿ ಹತ್ತಿರವಿರುವ ಏಷ್ಯಾದ ದೇಶಗಳ ಪಕ್ಷಗಳು ಹಾಗೂ ಜನತೆಗಳ ಗೆಳೆತನ ಹಾಗೂ ಐಕ್ಯತೆಯನ್ನು ಬಲಪಡಿಸಿ ಸಾಮ್ರಾಜ್ಯಶಾಹಿ ಹಾಗೂ ವಸಾಹತುಶಾಹಿಯಿಲ್ಲದ ಒಂದು ಹೊಸ ಶಾಂತಿಯುತ ಹಾಗೂ ಸ್ವತಂತ್ರ ಏಷ್ಯಾ ಕಟ್ಟಲು ಹೋರಾಡಬೇಕು. ಆದ್ದರಿಂದ ನಾವು ಸಿ. ಪಿ. ಐ. (ಎಂ)ನೊಂದಿಗೆ ಸೋದರ ಸ್ನೇಹಮಯ ಸಂಬಂಧಗಳಿಗೆ ಬಹಳ ಮಹತ್ವ ಕೊಡುತ್ತೇವೆ. ಹಾಗೂ ಅವನ್ನು ಮತ್ತಷ್ಟು ಕ್ರೋಢೀಕರಿಸಿ ಬೆಳೆಸಲ್ ಸರ್ವಪ್ರಯತ್ನ ನಡೆಸುತ್ತೇವೆ" ಎಂದರು.

ಈ ಸದ್ಭಾವನೆಗಳಿಗೆ ಪ್ರತಿಯಾಗಿ ನಮ್ಮ ನಿಯೋಗ ತನ್ನ ಸದ್ಭಾವನೆಗಳನ್ನು ವ್ಯಕ್ತಪಡಿಸಿತು.

ನಿಯೋಗದೊಂದಿಗೆ ತನ್ನ ಮಾತುಕತೆಗಳಲ್ಲಿ ಕಾ। ಕಿಮ್ ಇಲ್‌ಸುಂಗ್ ಮೊದಲು ಕಾಂ। ಪಾಕ್‌ಸೊಂಗ್ ಚೋಲ್ ಹೇಳಿದ ಅಂಶಗಳನ್ನು ಮತ್ತಷ್ಟು ವಿಶದಪಡಿಸಿದರು. ತೃತೀಯ ಜಗತ್ತಿನ ದೇಶಗಳ ನಡುವೆ ಇನ್ನೂ ಹೆಚ್ಚಿನ ಸಹಕಾರಕ್ಕೆ ಅವರು ವಿಶೇಷ ಒತ್ತು ನೀಡಿ, ಸಾಮ್ರಾಜ್ಯಶಾಹಿಯನ್ನು ಎದುರಿಸುವಲ್ಲಿ ಇದು ಪ್ರಭಾವಪೂರ್ಣ ಅಂಶವಾಗುತ್ತದೆಯೆಂದರು. ತನ್ನ ಪಕ್ಷ ಹಾಗೂ ಸಿ.ಪಿ.ಐ.(ಎಂ) ನಡುವೆ ಸಂಬಂಧಗಳಲ್ಲಿನ ಸೋದರ ಭಾವ ಮುಂದುವರಿಯುತ್ತಿರುವುದರ ಬಗ್ಗೆ ತೃಪ್ತಿವ್ಯಕ್ತಪಡಿಸಿದ ಅವರು ಸದ್ಯದ ಭೇಟಿ ಅದನ್ನು ಮತ್ತಷ್ಟು ಬಲಪಡಿಸುವುದು ಎಂದರು. ಜಾಗತಿಕ ಕಮ್ಯುನಿಸ್ಟ್ ಚಳವಳಿಯ ಐಕ್ಯತೆಯ ಪುನರ್ಸ್ಥಾಪನೆಗಾಗಿ ದೃಢ ನಿರ್ಧಾರದ ಹೋರಾಟದ ಅಗತ್ಯವನ್ನು ಅವರು ಒತ್ತಿ ಹೇಳಿದರು.

ಹೆಚ್ಚು ಸಮಯವಿಲ್ಲದಿದ್ದರೂ ಸಾಧ್ಯವಾದಷ್ಟು ಫಾರ್ಮ್‌ಗಳು, ಕಾರ್ಖಾನೆಗಳು ಹಾಗೂ ಸಾಂಸ್ಕೃತಿಕ ಸಂಸ್ಥೆಗಳಿಗೆ ಭೇಟಿ ನೀಡಲು ನಿಯೋಗ ಅವಕಾಶ ಮಾಡಿಕೊಂಡಿತು. ಕೃಷಿ, ಕೈಗಾರಿಕೆಯ ಅಭಿವೃದ್ಧಿಯಲ್ಲಿ, ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನದ ಬಳಕೆಯಲ್ಲಿ, ಎಲ್ಲಕ್ಕೂ ಮಿಗಿಲಾಗಿ ಡಿ.ಪಿ.ಆರ್.ಕೆ.ನ ಜನತೆಯ ಜೀವನ ಮಟ್ಟ ಹಾಗೂ ಸಾಂಸ್ಕೃತಿಕ ಮಟ್ಟಗಳಲ್ಲಿ ಸಾಧಿಸಿದ ಗಮನಾರ್ಹ ಪ್ರಗತಿಯನ್ನು ಕಂಡು ನಿಯೋಗ ಚಕಿತಗೊಂಡಿತು. ಈ ಮೊದಲು ದೀರ್ಘ ಕಾಲದಿಂದ ವಸಾಹತುಶಾಹಿ ಆಳ್ವಿಕೆಗೊಳಗಾಗಿದ್ದು, ವಿಮೋಚನೆಯ ನಂತರವೂ ವಿನಾಶಕಾರಿ ಯುದ್ಧವನ್ನು ಎದುರಿಸಬೇಕಾಗಿ ಬಂದ ದೇಶವೊಂದರ ಜನತೆ, ಇವನ್ನೆಲ್ಲಾ ಸಾಧಿಸಲು ಸಾಧ್ಯವಾಯಿತೆಂಬ ಅಂಶ ಸಮಾಜವಾದಿ ವ್ಯವಸ್ಥೆಯ ಶಕ್ತಿಯನ್ನು ತೋರಿಸುತ್ತದೆ. ಇದು ಅಭಿವೃದ್ಧಿ ಹೊಂದಿರುವ ಎಲ್ಲಾ ದೇಶಗಳ ಜನತೆಗೆ ಒಂದು ಸ್ಫೂರ್ತಿಯಾಗಬೇಕು.

ಹುಬ್ಬಳ್ಳಿಯಲ್ಲಿ: ಐಕ್ಯತಾ ದಿನಾಚರಣೆ

ರಾಷ್ಟ್ರೀಯ ಆಂದೋಲನ ಸಮಿತಿ (ಎನ್‌ಸಿಸಿ)ಯ ಕರೆಯ ಮೇರೆಗೆ ಹುಬ್ಬಳ್ಳಿ–ಧಾರವಾಡ ಮಹಾನಗರದಲ್ಲಿ ಸಿ. ಐ. ಟಿ. ಯು. ನೇತೃತ್ವದ ಜಂಟೀ ಕ್ರಿಯಾ ಸಮಿತಿಯು ಜೂನ್ 4 ರಂದು 'ಕಾರ್ಮಿಕರ ಐಕ್ಯತಾ ದಿನ'ವನ್ನಾಚರಿಸಿತು. ಅಂದು ಸಂಜೆ ಸ್ಥಳೀಯ ಭಗಿನಿ ಮಂಡಳ ಸಭಾಗೃಹದಲ್ಲಿ ಆಯೋಜಿಸಲಾಗಿದ್ದ ಸಭೆಯಲ್ಲಿ ವಿವಿಧ ಸಂಘಟನೆಗಳ ಸುಮಾರು ಅರವತ್ತು ಪ್ರತಿನಿಧಿಗಳು ಭಾಗವಹಿಸಿದ್ದರು. ಇಂಡಿಯನ್ ಪ್ಲೈವುಡ್ ಯೂನಿಯನ್ನಿನ ಉಪಾಧ್ಯಕ್ಷ ಕಾ। ಎಂ. ಬಿ. ಕಟ್ಟಿಯವರು ಪ್ರತಿನಿಧಿಗಳನ್ನು ಸ್ವಾಗತಿಸಿದ ನಂತರ ಸಭೆಯ ಅಧ್ಯಕ್ಷತೆ ವಹಿಸಿದ್ದ ಕಾ. ವ್ಹಿ. ಎನ್. ಹಳಕಟ್ಟಿಯವರು ಐಕ್ಯತಾ ದಿನಾಚರಣೆಯ ಹಿನ್ನೆಲೆ ಹಾಗೂ ಮಹತ್ವಗಳನ್ನು ವಿಸ್ತಾರವಾಗಿ ವಿವರಿಸಿದರು. 1980 ಜೂನ್ 4ರ ಮುಂಬೈ ಸಮಾವೇಶವು ದೇಶದಲ್ಲಿ ಐಕ್ಯ ಟ್ರೇಡ್‌ಯೂನಿಯನ್ ಹೋರಾಟಗಳ ಹೊಸ ಅಧ್ಯಾಯವನ್ನೇ ಪ್ರಾರಂಭಿಸಿತೆಂದು ಹೇಳಿದ ಅವರು ನವ್ಹೆಂಬರ 23, 1981ರ ನವದೆಹಲಿಯಲ್ಲಿಯ ಪ್ರಚಂಡ ಮತಪ್ರದರ್ಶನ, ಜನವರಿ 19 ರ ಚಾರಿತ್ರಿಕ ಭಾರತ ಬಂದ್‌ಗಳನ್ನು ನೆನಪಿಸಿಕೊಟ್ಟರು. ಇಂದಿರಾ ಸರಕಾರವು ಕಾರ್ಮಿಕ ವರ್ಗದ ಮೇಲೆ ನಡೆಸಿರುವ ಹಲವು ಬಗೆಯ ದಾಳಿಗಳನ್ನು ಹಿಮ್ಮೆಟ್ಟಿಸಲು ಅಷ್ಟೇ ಅಲ್ಲ ವಿವಿಧ ಶೋಷಿತ ಜನವಿಭಾಗಗಳ ಹೋರಾಟಗಳಲ್ಲೂ ಸಕ್ರಿಯವಾಗಿ ಹಾಗೂ ಮುಂಚೂಣಿಯ ಪಾತ್ರ ವಹಿಸಲು ಮುಂಬರುವ ದಿನಗಳಲ್ಲಿ ಇನ್ನೂ ವ್ಯಾಪಕ ಸ್ವರೂಪದ ಐಕ್ಯ ಹೋರಾಟಗಳನ್ನು ಬೆಳೆಸಬೇಕಿದೆ ಎಂದು ಅವರು ನುಡಿದರು. ಕಾ. ಸುಧೀಂದ್ರ ಅವರು 'ವಿಶ್ವಶಾಂತಿ ರಕ್ಷಣೆಯ ಹೋರಾಟ,' 'ಕೋಮುವಾದ ಮತ್ತು ವಿಚ್ಛಿದ್ರಕಾರಿ ಶಕ್ತಿಗಳಿಂದುಂಟಾಗಿರುವ ಅಪಾಯ,' 'ಕಾರ್ಮಿಕ ವರ್ಗದ ಹಾಗೂ ಒಟ್ಟು ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗಾಗಿ ಹೋರಾಟ, 'ಮುಂಬೈ ಜವಳಿ ಕಾರ್ಮಿಕರ ಐತಿಹಾಸಿಕ ಮುಷ್ಕರ ಅಲ್ಲದೇ ಸ್ಥಳೀಯ ಬಿ. ಡಿ. ಕೆ., ಸುಂದತ್ತಾ ಮತ್ತು ಕೃಷಿ ಕಾರ್ಮಿಕರ ಹೋರಾಟಗಳಿಗೆ ಬೆಂಬಲ' ಇತ್ಯಾದಿ ಒಟ್ಟು ಆರು ಗೊತ್ತುವಳಿಗಳನ್ನು ಮಂಡಿಸಿದರು. ಗೊತ್ತುವಳಿಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸುತ್ತಾ ಮೈಸೂರ್ ಕಿರ್ಲೋಸ್ಕರ್ ಯೂನಿಯನ್ನಿನ ವೈ. ಎಸ್. ಕುಲಕರ್ಣಿ, ಎ. ಕೆ. ಇಂಡಸ್ಟ್ರೀಸ್ ಸಂಘದ ಕಾ। ಪರಪ್ಪನವರ, ಬಿ.ಡಿ.ಕೆ. ಸಂಘದ ಕಾ। ಶಿರಪೂರ್, ಕೃಷಿ ಕಾರ್ಮಿಕರ ಸಂಘದ ಕಾ। ಸವದತ್ತಿ, ಮಾಧ್ಯಮಿಕ ಶಾಲಾ ಶಿಕ್ಷಕರ ಸಂಘದ ಕಾ। ಕೆ. ವ್ಹಿ. ರಾಯಚೂರ, ಕ. ವಿ. ಶಿಕ್ಷಕೇತರ ನೌಕರರ ಸಂಘದ ಕಾ. ಕಮ್ಮಾರ, ಗುಲ್ಬರ್ಗಾದಿಂದ ಬಂದಿದ್ದ ಕಾ॥ ಎಂ. ಬಿ. ಸಜ್ಜನ, ಡಿ.ವೈ.ಎಫ್. ಐ. ನ ಕಾ। ಜಿ. ಸಿ. ಪೈ. ಮಠ, ಕೆ. ಇ. ಸಿ. ಯೂನಿಯನ್ನಿನ ಕಾ। ಸ್ವಾದಿ ಹೀಗೆ ಹಲವಾರು ಸಂಗಾತಿಗಳು ಮಾತನಾಡಿದರು. ಕೆಲವು ಅಲ್ಪ ಬದಲಾವಣೆಗಳೊಂದಿಗೆ ಗೊತ್ತುವಳಿಗಳನ್ನು ಸರ್ವಾನುಮತದಿಂದ ಸ್ವೀಕರಿಸಲಾಯಿತು. ಕೊನೆಯಲ್ಲಿ ಕಾ। ವ್ಹಿ. ಎಂ. ಪೂಜಾರ ವಂದನಾರ್ಪಣೆ ಮಾಡಿದರು.

"ಕಾರ್ಮಿಕ ವರ್ಗ ಮತ್ತು ಹಳ್ಳಿಯ ಬಡವರು"

ಎಂ. ಕೆ. ಭಟ್

ಕಾರ್ಮಿಕರ ಮತ್ತು ರೈತ ಸಖ್ಯತೆ :

ಭಾರತ ದೇಶದ ಪರಿಸ್ಥಿತಿಯಲ್ಲಿ ಕಾರ್ಮಿಕ ವರ್ಗವನ್ನು ಒಗ್ಗೂಡಿಸಿ, ಕಾರ್ಮಿಕ ವರ್ಗದ ನೇತೃತ್ವದಲ್ಲಿ ಕಾರ್ಮಿಕರ ಮತ್ತು ರೈತರ ಸಖ್ಯತೆಯನ್ನು ಸಾಧಿಸಿ, ಈ ಸಖ್ಯತೆಯ ಸುತ್ತ ಇತರೆ ಪ್ರಜಾಪ್ರಭುತ್ವ ವಿಭಾಗಗಳನ್ನು ಸೇರಿಸಿಕೊಂಡು ಸಾಮ್ರಾಜ್ಯಶಾಹಿ ಮತ್ತು ಗುತ್ತೇದಾರಿ ಬಂಡವಾಳಶಾಹಿಗಳ ವಿರುದ್ಧವೂ, ಊಳಿಗಮಾನ್ಯ ಪದ್ಧತಿಯ ಅವಶೇಷಗಳ ವಿರುದ್ಧವೂ ಹೋರಾಡುತ್ತಾ ಜನತಾ ಪ್ರಜಾಪ್ರಭುತ್ವ ಕ್ರಾಂತಿಯನ್ನು ಪೂರ್ಣಗೊಳಿಸುವುದು ಸಮಾಜವಾದಿ ಕ್ರಾಂತಿಗೆ ಮೊದಲು ನಡೆಯಬೇಕಾದ ಚಾರಿತ್ರಿಕ ಕೆಲಸವಾಗಿದೆ. ಜನತಾ ಪ್ರಜಾಪ್ರಭುತ್ವ ಕ್ರಾಂತಿಯನ್ನು ನಡೆಸುವ ಜನತಾ ಪ್ರಜಾಪ್ರಭುತ್ವ ರಂಗದ ಬೆನ್ನೆಲುಬು ರೈತ ಮತ್ತು ಕಾರ್ಮಿಕರೊಳಗಿನ ಸಖ್ಯತೆಯೇ ಆಗಿದೆ. ದೇಶದಲ್ಲಿ ಕಾರ್ಮಿಕ ವರ್ಗದ ಪಕ್ಷ ಮತ್ತು ಎಡಶಕ್ತಿಗಳು ಸಾಕಷ್ಟು ಬಲಿಷ್ಟವಿರದ ಸಧ್ಯದ ಪರಿಸ್ಥಿತಿಯಲ್ಲಿ ಸಂಯುಕ್ತರಂಗ ಚಟುವಟಿಕೆಗಳೂ, ಎಡ ಪ್ರಜಾಪ್ರಭುತ್ವ ಶಕ್ತಿಗಳನ್ನು ಒಗ್ಗೂಡಿಸುವ ಪ್ರಯತ್ನಗಳೂ ಮುಂದೆ ಕಾರ್ಮಿಕ ವರ್ಗ ಮತ್ತು ರೈತರೊಳಗೆ ಸಖ್ಯತೆಯನ್ನು ಬೆಳೆಸಿ ಜನತಾ ಪ್ರಜಾಪ್ರಭುತ್ವ ರಂಗ (Peoples Democratic Front) ವನ್ನು ಕಟ್ಟುವುದಕ್ಕೆ ಸಹಾಯವಾಗುತ್ತದೆ.

ಕಾರ್ಮಿಕ ಸಂಘಟನೆಗಳನ್ನು ಕಟ್ಟುವಾಗ ಈ ಮೇಲಿನ ಅಂಶಗಳನ್ನು ಗಮನದಲ್ಲಿರಿಸಿ, ಪ್ರಜ್ಞಾಪೂರ್ವಕವಾಗಿ ಕೆಲಸ ಮಾಡುವುದು ಅತೀ ಅವಶ್ಯ. ಪ್ರಾರಂಭದಲ್ಲಿ ಕಾರ್ಮಿಕರನ್ನು ಅವರ ಆರ್ಥಿಕ ಬೇಡಿಕೆಗಳು ಮತ್ತು ದಿನ ನಿತ್ಯ ಕಾಡಿಸುವ ಸಮಸ್ಯೆಗಳ ಆಧಾರದಲ್ಲೇ ಸಂಘಟಿಸಬೇಕಾಗುತ್ತದೆ. ಆದರೆ ಕಾರ್ಮಿಕರ ಸಂಘಟನೆಗಳ ಚಟುವಟಿಕೆಗಳನ್ನು ಕೇವಲ ಆರ್ಥಿಕ ಬೇಡಿಕೆಗಳನ್ನು ಈಡೇರಿಸುವಷ್ಟಕ್ಕೆ ಸೀಮಿತಗೊಳಿಸದೆ ಕಾರ್ಮಿಕರಲ್ಲಿ ವರ್ಗ ಜಾಗೃತಿಯನ್ನೂ, ವರ್ಗ ಐಕ್ಯತೆಯನ್ನೂ ಬೆಳೆಸಬೇಕು. ಕಾರ್ಮಿಕರ ಸಂಘಟನೆಯ ಪ್ರಜ್ಞೆಯ ಮಟ್ಟದಿಂದ ಕಾರ್ಮಿಕರನ್ನು ವರ್ಗ ಜಾಗೃತಿಯ, ಸಮಾಜವಾದಿ ಅಥವಾ ಕ್ರಾಂತಿಕಾರಿ ಜಾಗೃತಿಯ ಮಟ್ಟಕ್ಕೆ ಏರಿಸಬೇಕು. ತಮ್ಮ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ದೊರೆಯಬೇಕಾದರೆ ಸಮಾಜವಾದಿ ಪದ್ಧತಿ ಬರಬೇಕೆಂದೂ, ಸಮಾಜವಾದಿ ಪದ್ಧತಿ ಬರಬೇಕಾದರೆ ಕಾರ್ಮಿಕ ವರ್ಗ ತಾನು ಒಂದಾಗಿ ರೈತರೊಂದಿಗೆ ಸಖ್ಯತೆಯನ್ನು ಸಾಧಿಸಿ, ಇತರೆ ಪ್ರಜಾಪ್ರಭುತ್ವ ಜನ ವಿಭಾಗಗಳ ಬೆಂಬಲವನ್ನೂ ಪಡೆದು ಬಂಡವಾಳಶಾಹಿ ಪದ್ಧತಿಯ ವಿರುದ್ಧ ಹೋರಾಡಬೇಕೆಂಬ ಪ್ರಜ್ಞೆಯನ್ನು ಕಾರ್ಮಿಕರಲ್ಲಿ ಮೂಡಿಸಬೇಕು.

ಇರುವ ಪರಿಸ್ಥಿತಿ

ಇಂದು ಪಶ್ಚಿಮ ಬಂಗಾಳ, ತ್ರಿಪುರದಂತಹ ಕೆಲವು ರಾಜ್ಯಗಳನ್ನು ಬಿಟ್ಟರೆ ದೇಶದ ಬಹು ಭಾಗದಲ್ಲಿ ಹಳ್ಳಿಯ ಬಡವರು, ರೈತರು ಮತ್ತು ಜನಸಾಮಾನ್ಯರು ಹೆಚ್ಚು ಕಡಿಮೆ ಬಂಡವಾಳಶಾಹಿ ಪಕ್ಷ ಮತ್ತು ಸಿದ್ಧಾಂತಗಳ ಪ್ರಭಾವದಡಿಯಲ್ಲಿಯೇ ಇರುವರು. ದೇಶವನ್ನು ಆಳಿಕೊಂಡು ಬಂದಿರುವ ಬಂಡವಾಳಶಾಹಿ ಭೂಮಾಲಿಕ ಪಕ್ಷಗಳ ಧೋರಣೆಯಿಂದ ಜನತೆ ಬೇಸತ್ತಿದೆಯಾದರೂ ನಿಜವಾದ ಪರ್ಯಾಯದ ಅಂದರೆ ಎಡ ಪರ್ಯಾಯದ ಕಲ್ಪನೆ ಅವರಿಗಿಲ್ಲ. ರಾಷ್ಟ್ರ ಮಟ್ಟದಲ್ಲಿ ಕಾರ್ಮಿಕ ಐಕ್ಯ ಕಾರ್ಯಾಚರಣೆಯೂ, ರಾಜಕೀಯ ಹೋರಾಟದಲ್ಲಿ ಭಾಗವಹಿಸುವುದೂ ಇತ್ತೀಚಿಗಿನ ದಿನಗಳಲ್ಲಿ ಹೆಚ್ಚುತ್ತಿವೆಯಾದರೂ ಇನ್ನೂ ಸಾಧಿಸಬೇಕಾಗಿರುವುದು ಬಹಳಷ್ಟಿದೆ. ಕಾರ್ಮಿಕರಲ್ಲಿ ಅಂತರ್ರಾಷ್ಟ್ರೀಯ ಪ್ರಜ್ಞೆ ಮತ್ತು ಅಖಿಲ ಭಾರತ ಪ್ರಜ್ಞೆಯನ್ನೂ ಬೆಳೆಸಬೇಕಿದೆ. ಪ್ರಾದೇಶಿಕತೆ, ಜಾತೀಯತೆ, ಕೋಮು ಭಾವನೆ ಹಾಗೂ ಇನ್ನಿತರ ಛಿದ್ರಕಾರಿ ಘೋಷಣೆಗಳನ್ನು ಕೊಟ್ಟು ಜನತೆಯ ಮತ್ತು ಕಾರ್ಮಿಕ ವರ್ಗದ ಐಕ್ಯತೆಯನ್ನೂ ದೇಶದ ಸಮಗ್ರತೆಯನ್ನೂ ನಾಶ ಮಾಡಲು ವಿಚ್ಛಿದ್ರಕಾರಿ ಶಕ್ತಿಗಳೂ ಸಾಮ್ರಾಜ್ಯಶಾಹಿ ಶಕ್ತಿಗಳೂ ಪಿತೂರಿ ನಡೆಸುತ್ತಿರುವ ಇಂದಿನ ಸಂದರ್ಭದಲ್ಲಿ ಕಾರ್ಮಿಕ ವರ್ಗದ ಮೇಲೆ ಬಹಳ ದೊಡ್ಡ ಜವಾಬ್ದಾರಿಯಿದೆ. ಶೋಷಣೆಗೆ ಮತ್ತು ಅನ್ಯಾಯಕ್ಕೊಳಗಾದ ಎಲ್ಲಾ ಜನತೆಯ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡುವ ಶಕ್ತಿಯಾಗಿಯೂ, ದೇಶದ ಸಮಗ್ರತೆಯ ಪ್ರತಿಪಾದಕನಾಗಿಯೂ ಇಂದು ಕಾರ್ಮಿಕ ವರ್ಗ ಮತ್ತು ಅದರ ಪಕ್ಷ ಮುನ್ನಡೆಯಬೇಕಿದೆ. ಈ ಎಲ್ಲಾ ಅಂಶಗಳನ್ನು ಗುರುತಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಂಡು ಯಶಸ್ವಿಯಾಗಿ ಮುಗಿದಿರುವ ಇತ್ತೀಚಿಗೆ ನಡೆದ ಸಿ. ಐ. ಟಿ. ಯು.ವಿನ ಅಖಿಲ ಭಾರತ ಸಮ್ಮೇಳನವು ಏಕ್ಯಶಕ್ತಿಯನ್ನು ಹೋಗಲಾಡಿಸಿ ಕಾರ್ಮಿಕ ವರ್ಗವನ್ನು ಒಗ್ಗೂಡಿಸಿ ಮುನ್ನಡೆಯುವುದಕ್ಕೆ ಸಹಾಯವಾಗುವುದು ಖಂಡಿತ.

ಸಮತಾವಾದದ ಶಾಲೆ

ಕಾರ್ಮಿಕ ಸಂಘಟನೆಗಳನ್ನು ಕಟ್ಟಿ ಬೆಳೆಸುವಾಗ ಪ್ರಾರಂಭದಿಂದಲೇ ರೈತರು ಹಾಗೂ ಇತರೆ ಜನ ವಿಭಾಗಗಳೊಂದಿಗೆ ಸಂಪರ್ಕ, ಸಂಬಂಧ, ಸೌಹಾರ್ದತೆಗಳನ್ನು ಬೆಳೆಸುವುದಕ್ಕೆ ಪ್ರಜ್ಞಾಪೂರ್ವಕವಾಗಿ ಗಮನವೀಯದಿದ್ದರೆ ಮುಂದುವರಿದ ಕಾರ್ಮಿಕ ವಿಭಾಗವನ್ನೂ, ಕಾರ್ಮಿಕರ ಸಂಘಟನೆಗಳನ್ನೂ ರೈತರ ಹಾಗೂ ಇತರೆ ಜನ ವಿಭಾಗಗಳ ವಿರೋಧಿಯೆಂದು ಸ್ಥಾಪಿತ ಹಿತಾಸಕ್ತಿಗಳು ಪ್ರಚಾರ ಮಾಡುವುದಕ್ಕೂ, ಒಂದು ವಿಭಾಗದ ವಿರುದ್ಧ ಇನ್ನೊಂದು ವಿಭಾಗವನ್ನು ಎತ್ತಿಕಟ್ಟುವುದಕ್ಕೂ ಸಾಧ್ಯವಾಗುತ್ತದೆ. ಆಳುವ ವರ್ಗದವರು ಇದನ್ನು ಸತತವಾಗಿ ನಡೆಸುತ್ತಾ ಬಂದಿರುವರು. ಇತ್ತೀಚಿಗಿನ ದಿನಗಳಲ್ಲಿ ರೈತ ಸಂಘಟನೆಯ ಹೆಸರಿನಲ್ಲಿ ಕಾರ್ಮಿಕರನ್ನೂ, ರೈತರನ್ನೂ ಪರಸ್ಪರ ಎತ್ತಿಕಟ್ಟುವ ಪ್ರಯತ್ನವನ್ನು ಕರ್ನಾಟಕ ರಾಜ್ಯ ಹಾಗೂ ಇನ್ನಿತರ ಕೆಲವೆಡೆ ರುದ್ರಪ್ಪನಂತವರು ಮಾಡಿದ್ದನ್ನು ನೆನಪಿಸಿಕೊಳ್ಳಬೇಕು. ಗ್ರಾಮೀಣ ಪ್ರದೇಶದ ಬಡ ಜನತೆಯನ್ನು ಸಂಘಟಿಸಿ ಅವರನ್ನು ಬಂಡವಾಳಶಾಹಿ-ಭೂಮಾಲಿಕ ಶಕ್ತಿಗಳ ಮತ್ತು ಸಿದ್ಧಾಂತಗಳ ಪ್ರಭಾವದಿಂದ ಬಿಡುಗಡೆಗೊಳಿಸಿ ಕಾರ್ಮಿಕ ವರ್ಗದ ಸಿದ್ಧಾಂತ ಮತ್ತು ಪಕ್ಷದ ಪ್ರಭಾವದಡಿಗೆ ತರುವುದಕ್ಕೆ ಕ್ರಾಂತಿಕಾರಿ ಕಾರ್ಮಿಕ ಸಂಘಟನೆಗಳೂ, ಕಾರ್ಮಿಕ ವರ್ಗದ ಐಕ್ಯವೂ ಸತತವಾಗಿ ಶ್ರಮಿಸಬೇಕು. ಕಾರ್ಮಿಕ ಸಂಘಟನೆಗಳೆಂದರೆ "ಸಮತಾವಾದದ ಶಾಲೆ" ಎಂಬುದನ್ನು ತಿಳಿದುಕೊಂಡು, ಸಮರಶೀಲ ಕಾರ್ಮಿಕ ಕಾರ್ಯಕರ್ತರನ್ನು ಹಳ್ಳಿಯ ರೈತರ ಮತ್ತು ಬಡವರ ಸಂಘಟನೆಯನ್ನು ಕಟ್ಟುವ ಕೆಲಸಕ್ಕೆ ಹಚ್ಚುವುದಕ್ಕೆ ಗಮನವೀಯಬೇಕು. ಸಾಮಾಜಿಕವಾಗಿ ಹಿಂದುಳಿದಿರುವ, ಚದುರಿರುವ, ಸಂಘಟಿಸಲು ಕಷ್ಟವಾಗಿರುವ ಹಳ್ಳಿಯ ಬಡವರನ್ನು ಸಂಘಟಿಸಲೂ, ಅವರಿಗೆ ಸೌಹಾರ್ದ ಬೆಂಬಲವನ್ನಿತ್ತು ಸಖ್ಯತೆಯನ್ನು ಬೆಳೆಸಲೂ ಕಾರ್ಮಿಕ ಸಂಘಟನೆಗಳೂ ಗಮನವೀಯುವಂತೆ ಮಾಡಬೇಕು.

ಸೈದ್ಧಾಂತಿಕ ಹೋರಾಟ

ಕಾರ್ಮಿಕ ವರ್ಗದ ಸಿದ್ಧಾಂತದ ವಿರುದ್ಧ, ಮಾರ್ಕ್ಸ್‌ವಾದ-ಲೆನಿನ್‌ವಾದದ ವಿರುದ್ಧ ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿ ಶಕ್ತಿಗಳು ತೀವ್ರ ಧಾಳಿಯನ್ನು ನಡೆಸುತ್ತಿರುವ ಇಂದಿನ ಸಂದರ್ಭ ಕಾರ್ಮಿಕ ವರ್ಗ ಮತ್ತದರ ಪಕ್ಷ ತೀವ್ರವಾದ ಸೈದ್ಧಾಂತಿಕ ಹೋರಾಟವನ್ನು ನಡೆಸಬೇಕು. ಹಾಗೆಯೇ ಕ್ರಾಂತಿಕಾರಿ ಶಕ್ತಿಗಳ ಒಗ್ಗಟ್ಟಿಗೂ, ಸಮಾಜದ ಪ್ರಗತಿಗೂ ಅಡ್ಡಿಯಾಗಿರುವ ನಮ್ಮ ದೇಶದಲ್ಲಿ ಅತಿಯಾಗಿರುವ ಊಳಿಗಮಾನ್ಯ ಪದ್ಧತಿಯ ಮೌಲ್ಯಗಳ ವಿರುದ್ಧವೂ, ನೈತಿಕತೆಯನ್ನೆ ಇಲ್ಲವಾಗಿಸುತ್ತಿರುವ ಬಂಡವಾಳಶಾಹಿ ಮೌಲ್ಯಗಳ ವಿರುದ್ಧವೂ ಸಂಘಟಿತ ಹಾಗೂ ಸತತ ಹೋರಾಟವನ್ನು ನಡೆಸಬೇಕು. ಕಾರ್ಮಿಕ ಸಂಘಟನೆಗಳು ತಮ್ಮ ದಿನ ನಿತ್ಯದ ಚಟುವಟಿಕೆಗಳೊಂದಿಗೆ ಹೊಸ ಮೌಲ್ಯಗಳನ್ನೂ, ವೈಜ್ಞಾನಿಕ ಮನೋಗತಿಯನ್ನೂ, ಸಮಾಜವಾದಿ ಚಿಂತನೆಗಳನ್ನೂ ಪ್ರತಿಪಾದಿಸುವಂತಾಗಬೇಕು. ರೈತರನ್ನು ಮತ್ತು ಹಳ್ಳಿಯ ಬಡವರನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯುವುದು ಸಾಧ್ಯವಾಗಬೇಕಾದರೆ ಕಾರ್ಮಿಕ ವರ್ಗವು ತನ್ನ ಚಾರಿತ್ರಿಕ ಜವಾಬ್ದಾರಿಯನ್ನು ನೆರವೇರಿಸುವ ದಿಕ್ಕಿನಲ್ಲಿ ಅದನ್ನು ಸಂಘಟಿಸಿ ಕೊಂಡೊಯ್ಯುವ ಕೆಲಸಕ್ಕೆ ಅತ್ಯಂತ ಹೆಚ್ಚಿನ ಆದ್ಯತೆಯನ್ನೀಯುವುದು ಅವಶ್ಯ. ತನ್ನ ಚಟುವಟಿಕೆಗಳ ಮೂಲಕವೂ, ಪ್ರಚಾರ ಪ್ರಕ್ಷೋಭೆಗಳ ಮೂಲಕವೂ, ಸಂಘಟನಾ ಕೆಲಸದ ಮೂಲಕವೂ ತಾನು ನಿಜವಾದ ಆಪ್ತ ಎಂಬುದನ್ನು ರೈತರಿಗೂ, ಹಳ್ಳಿಯ ಬಡವರಿಗೂ, ಶೋಷಣೆಗೊಳಗಾದ ಎಲ್ಲ ಜನರಿಗೂ ಕಾರ್ಮಿಕ ವರ್ಗ ತೋರಿಸಿ ಕೊಡಬೇಕು. ಎಡ ಪ್ರಜಾಪ್ರಭುತ್ವ ಚಳುವಳಿ ಬಹಳ ಹಿಂದಿರುವ ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕ ವರ್ಗವನ್ನು ಈ ದಿಸೆಯಲ್ಲಿ ಕೊಂಡೊಯ್ಯುವುದಕ್ಕೆ ಹೆಚ್ಚಿನ ಶ್ರಮವಹಿಸಬೇಕು. ಇದಕ್ಕೆ ಪೂರಕವಾಗಿ ಗ್ರಾಮೀಣ ಬಡಜನತೆಯ ಸಂಘಟಿತ ಚಳುವಳಿಗಳನ್ನು ವ್ಯಾಪಕವಾಗಿ ಬೆಳೆಸಬೇಕು.

ಕಾರ್ಮಿಕ ವರ್ಗವು ಕ್ರಾಂತಿಕಾರಿ ವರ್ಗ. ಕಾರ್ಮಿಕ ವರ್ಗದ ನೇತೃತ್ವದಿಂದ ಮಾತ್ರ ಸಮಾಜವಾದದತ್ತ ಹೋಗುವುದು ಸಾಧ್ಯ. ಹಾಗೆಂದಾಕ್ಷಣ ಕಾರ್ಮಿಕರಾದ ತಕ್ಷಣ ಅವರಲ್ಲಿ ವರ್ಗ ಜಾಗೃತಿಯೂ ಕ್ರಾಂತಿಕಾರಿ ಜಾಗೃತಿಯೂ ಇದೆಯೆಂದು ಹೇಳಲು ಸಾಧ್ಯವಿಲ್ಲ. ಅವರ ಮೇಲೆ ಶೋಷಕ ವರ್ಗಗಳ ಸಿದ್ಧಾಂತ ಮತ್ತು ರಾಜಕೀಯಗಳ ಪ್ರಭಾವವಿರುವುದು ಸ್ವಾಭಾವಿಕ. ತಮ್ಮ ವರ್ಗದ ಐಕ್ಯತೆಗೆ ಪ್ರತಿಕೂಲವಾಗುವಂತಹ ಅನೇಕ ಸಾಮಾಜಿಕ ಮೌಲ್ಯಗಳು ಭಾರತ ದೇಶದಲ್ಲಿನ ಕಾರ್ಮಿಕರ ಮಧ್ಯೆ ಬೆಳೆದು ಬಂದಿವೆ. ಅವನ್ನು ಉಪಯೋಗಿಸಿಕೊಂಡು ಕಾರ್ಮಿಕರಲ್ಲಿ ಬೆಳೆದು ಬರುತ್ತಿರುವ ಒಗ್ಗಟ್ಟನ್ನು ಹತ್ತಿಕ್ಕಲು ಜಾತೀಯ ಸಂಘಟನೆಗಳು, ಧಾರ್ಮಿಕ ಚಟುವಟಿಕೆಗಳು ಮೊದಲಾದುವನ್ನು ಛಿದ್ರಕಾರಿ ಶಕ್ತಿಗಳು ಬೆಳೆಸುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಕಾರ್ಮಿಕರ ಮಧ್ಯೆ ಸೈದ್ಧಾಂತಿಕ ತರಬೇತಿ ನೀಡುವ ಕೆಲಸವು ದೊಡ್ಡ ಪ್ರಮಾಣದಲ್ಲಿ ನಡೆಯಬೇಕು. ಹೋರಾಟ ಮತ್ತು ಸೈದ್ಧಾಂತಿಕ ತಿಳುವಳಿಕೆ ನೀಡುವುದರ ಮೂಲಕ ಅವರಲ್ಲಿ ವರ್ಗ ಜಾಗೃತಿ ಮತ್ತು ಕ್ರಾಂತಿಕಾರಿ ಪ್ರಜ್ಞೆಯನ್ನು ಉಂಟು ಮಾಡಿ ತಮ್ಮ ವರ್ಗದ ಸಿದ್ಧಾಂತವನ್ನು ಅಪ್ಪಿಕೊಳ್ಳುವಂತೆ ಮಾಡಬೇಕು. ಆಗ ಮಾತ್ರ ಕಾರ್ಮಿಕ ವರ್ಗ ತಾನು ಒಂದಾಗಿ ಶೋಷಕ ವರ್ಗಗಳ ಸಿದ್ಧಾಂತಗಳ ವಿರುದ್ಧ ಪ್ರಬಲವಾದ ಸೈದ್ಧಾಂತಿಕ ಹೋರಾಟವನ್ನು ನಡೆಸುವುದು ಸಾಧ್ಯವಾಗುತ್ತದೆ.

ರೈತ ಸಂಘಟನೆ

ದೇಶದ ಹೆಚ್ಚಿನ ಜನ ಹಳ್ಳಿಗಳಲ್ಲಿ ಇದ್ದು ಕೃಷಿ ಪ್ರಧಾನವಾಗಿರುವ ಭಾರತ ದೇಶದಲ್ಲಿ ರೈತರ ಮತ್ತು ಹಳ್ಳಿಯ ಬಡವರ ಸಂಘಟನೆಗಳಿಗೆ ಬಹಳ ಮಹತ್ವವಿದೆ. "ಭೂಮಿಯ ಪುನರ್‌ವಿತರಣೆಯೇ" ಹಳ್ಳಿಯ ಬಡವರ ಮುಖ್ಯ ಘೋಷಣೆಯಾಗಿರುವುದಾದರೂ ಸಂಘಟನೆ ನಿಶ್ಶಕ್ತಿಯಿಂದಿರುವ ಸಧ್ಯದ ಪರಿಸ್ಥಿತಿಯಲ್ಲಿ ಇದು ಕೇವಲ ಪ್ರಚಾರದ ಘೋಷಣೆಯಾಗಿದೆ. ಸಧ್ಯದ ಪರಿಸ್ಥಿತಿಯಲ್ಲಿ ಹಳೆ ಕೃಷಿ ಸಂಬಂಧಗಳ ವಿರುದ್ಧವೂ, ಇತರೆ ಪ್ರಜಾಪ್ರಭುತ್ವ ಬೇಡಿಕೆಗಳಿಗಾಗಿಯೂ ಹೋರಾಡುತ್ತಾ ಹೋರಾಟಗಳ ಸಣ್ಣ ಸಣ್ಣ ಪ್ರವಾಹಗಳನ್ನು ಒಂದು ಸೇರಿಸಿ ದೊಡ್ಡ ಪ್ರವಾಹವನ್ನಾಗಿ ಮಾಡಬೇಕು. ಕೃಷಿ ಕ್ಷೇತ್ರವಿಡೀ ಬಿಕ್ಕಟ್ಟಿಗೊಳಗಾಗಿರುವ ಇಂದಿನ ಪರಿಸ್ಥಿತಿಯಲ್ಲಿ ವಿಶಾಲ ತಳಹದಿಯ ಒಗ್ಗಟ್ಟಿನಲ್ಲಿ ವ್ಯಾಪಕ ಚಳುವಳಿಗಳನ್ನೂ ಬೆಳೆಸಬೇಕು. ಆದರೆ ಈ ಎಲ್ಲ ಹೋರಾಟಗಳ ಮತ್ತು ಸಂಘಟನೆಗಳ ನೇತೃತ್ವ ಹಳ್ಳಿಯ ಬಡವರಲ್ಲಿರಬೇಕು.

ಹಳ್ಳಿಯಲ್ಲಿರುವ ಬೇರೆ ಬೇರೆ ವಿಭಾಗಗಳೊಳಗಿನ ವೈರುಧ್ಯಗಳನ್ನು ಗುರುತಿಸಿಕೊಂಡು ಹಳ್ಳಿಯ ಅತೀ ಬಡವರ ಆಧಾರಿತವಾಗಿ ಸಂಘಟನೆಯನ್ನು ಕಟ್ಟಬೇಕು. ರೈತ ಸಂಘಟನೆಯು ಕ್ರಾಂತಿಕಾರಿ ದಿಸೆಯಲ್ಲಿ ಮುನ್ನಡೆಯಬೇಕಾದರೆ ಅದು ಸರಿಯಾದ ವರ್ಗದ ನೇತೃತ್ವದಲ್ಲಿರಬೇಕು. ಬಂಡವಾಳಶಾಹಿ ಕೃಷಿ ಸಂಬಂಧಗಳು ಸಾಕಷ್ಟು ಬೆಳೆದು ಬರುತ್ತಿರುವ ಈಗಿನ ಪರಿಸ್ಥಿತಿಯಲ್ಲಿ ಕೃಷಿ ಕೂಲಿಗಾರರ ಸಂಘಟನೆಯೂ ಬಹಳ ಅವಶ್ಯ. ಈ ಅಂಶಗಳನ್ನೆಲ್ಲಾ ಗಮನದಲ್ಲಿರಿಸಿ ಅಖಿಲ ಭಾರತ ಕಿಸಾನ್ ಸಭಾವು ಇತ್ತೀಚೆಗೆ ನಡೆದ ಮಿಡ್ನಾಪುರ ಸಮ್ಮೇಳನದಲ್ಲಿ ರಾಷ್ಟ್ರಮಟ್ಟದಲ್ಲಿ ಕೃಷಿ ಕೂಲಿಗಾರರ ಸಂಘಟನೆಯನ್ನೂ ರೂಪಿಸಿಕೊಂಡಿದೆ. ರೈತ ಸಂಘಟನೆ ಮತ್ತು ಕೃಷಿ ಕೂಲಿಗಾರರ ಸಂಘಟನೆಗಳು ಒಂದಕ್ಕೊಂದು ಪೂರಕವಾಗಿ ಬರುವಂತೆ ಮಾಡಲು ವಿಶೇಷ ಶ್ರಮವಹಿಸಬೇಕು.

ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕ ವರ್ಗದೊಂದಿಗೆ ಸಖ್ಯತೆ ಬೆಳೆಸುವ ದಿಕ್ಕಿನಲ್ಲಿ ರೈತರನ್ನೂ, ಹಳ್ಳಿಯ ಬಡವರನ್ನೂ ಕೊಂಡೊಯ್ಯುವ ದೃಷ್ಟಿಯನ್ನಿರಿಸಿಕೊಂಡಿರುವ ಕರ್ನಾಟಕ ಪ್ರಾಂತ ರೈತ ಸಂಘವು ಸಾಕಷ್ಟು ಪ್ರಬಲವಾಗಿರದ ಸಂದರ್ಭದಲ್ಲಿ ರೈತರನ್ನು ಸಂಘಟಿಸುವ ನೆವದಲ್ಲಿ ಅವರನ್ನು ತಪ್ಪು ದಾರಿಗೆಳೆಯಲು ಪ್ರಯತ್ನ ನಡೆಯುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ರೈತರನ್ನು ತಪ್ಪುದಾರಿಗೆಳೆಯುವುದನ್ನು ವಿರೋಧಿಸುತ್ತಾ ಪ್ರಬಲ ಮತ್ತು ವ್ಯಾಪಕವಾಗಿ ರೈತ ಸಂಘಟನೆಯನ್ನು ಬೆಳೆಸುತ್ತಾ ಅವರನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯಲು ವಿಶೇಷ ಶ್ರಮವಹಿಸಬೇಕು. ಕರ್ನಾಟಕ ಪ್ರಾಂತ ರೈತ ಸಂಘವು ರಾಜ್ಯದ ಪ್ರತಿಯೊಂದು ಹಳ್ಳಿಯಲ್ಲೂ ಬೆಳೆದು ಬರುವಂತೆ ಮಾಡುವ ಕನಸನ್ನು ಕಾಣಬೇಕು. ಅದನ್ನು ನನಸಾಗಿಸಲು ಪ್ರಯತ್ನಿಸಬೇಕು.

ಕಾರ್ಮಿಕ ಸಂಘಟನೆಗಳ ಕುರಿತು ಹೇಳಿದ್ದಂತೆಯೇ ರೈತ ಸಂಘಟನೆಗಳು ರೈತರಲ್ಲೂ, ಹಳ್ಳಿಯ ಬಡವರಲ್ಲೂ ರಾಜಕೀಯ ಪ್ರಜ್ಞೆ ಬೆಳೆಸಲು ವಿಶೇಷ ಗಮನಹರಿಸಬೇಕು. ಗ್ರಾಮ ಮಟ್ಟದಿಂದಲೇ ಸಂಘಟನೆ ಮತ್ತು ಮುಖಂಡತ್ವವನ್ನು ಬೆಳೆಸಿ ಲಕ್ಷಾಂತರ ಮಂದಿ

(6ನೇ ಪುಟ ನೋಡಿ)

ಮಾರ್ಕ್ಸ್ ಮರಣಶತಾಬ್ದಿ: ಬರ್ಲಿನ್ ಸಮ್ಮೇಳನ

-ಇ.ಎಂ.ಎಸ್. ನಂಬೂದಿರಿಪಾಡ್

ಕಾರ್ಲ್‌ಮಾರ್ಕ್ಸ್‌ರವರ ನಿಧನದ ಶತಾಬ್ದಿಯ ಸಂದರ್ಭದಲ್ಲಿ ಜರ್ಮನ್ ಜನವಾದಿ ಗಣರಾಜ್ಯ (ಜಿ.ಡಿ.ಆರ್)ನ ಸಮಾಜವಾದಿ ಐಕ್ಯತಾ ಪಕ್ಷ ಬರ್ಲಿನ್‌ನಲ್ಲಿ ಏಪ್ರಿಲ್ 11 ರಿಂದ 16ರವರೆಗೆ ಅಂತರ್ರಾಷ್ಟ್ರೀಯ ಸಮ್ಮೇಳನವೊಂದನ್ನು ವ್ಯವಸ್ಥೆಗೊಳಿಸಿತು. ಸಿ. ಪಿ. ಐ. (ಎಂ)ನ ಪರವಾಗಿ ಪ್ರಧಾನ ಕಾರ್ಯದರ್ಶಿ ಇ. ಎಂ. ಎಸ್. ನಂಬೂದಿರಿ ಪಾಡ್ ಹಾಗೂ ಕೇಂದ್ರ ಸಮಿತಿ ಸದಸ್ಯ ರಾಮದಾಸ್‌ರನ್ನೊಳಗೊಂಡ ಇಬ್ಬರು ಸದಸ್ಯರ ಪ್ರತಿನಿಧಿ ಮಂಡಲ ಸಮ್ಮೇಳನದಲ್ಲಿ ಭಾಗವಹಿಸಿತು. ಸಮ್ಮೇಳನದ ಕುರಿತು ಇ. ಎಂ. ಎಸ್. ರ ವರದಿ ಇಲ್ಲಿದೆ.

ಇದಾದ ನಂತರ ನಡೆದ ಘಟನೆಯೊಂದನ್ನು ಇಲ್ಲಿ ಉಲ್ಲೇಖಿಸಬೇಕು. ಮೇಲೆ ಹೇಳಿದ ವೈಜ್ಞಾನಿಕ ಸಮ್ಮೇಳನದಲ್ಲಿ ಕಾಂಗ್ರೆಸ್(ಐ)ನ ಒಬ್ಬ ಪ್ರತಿನಿಧಿಯಾಗಿ ಭಾಗವಹಿಸಿದ ಸಿ. ಎಂ. ಸ್ಟೀಫನ್ ಭಾರತದ ಪತ್ರಿಕಾರಂಗದ ವಿಭಾಗವೊಂದಕ್ಕೆ ಒಂದು "ಸತ್ಯ"ವನ್ನು "ಪ್ರಕಟ"ಪಡಿಸಿದರು. ಅದೆಂದರೆ 'ಸಮ್ಮೇಳನದಲ್ಲಿ ಇ.ಎಂ.ಎಸ್.ರ ಭಾಷಣವನ್ನು ಸೆನ್ಸಾರ್ ಮಾಡಲಾಯಿತು. ಆದರೆ ಸ್ಟೀಫನ್‌ರ ಭಾಷಣವನ್ನು ಸಂಪೂರ್ಣವಾಗಿ ಪ್ರಕಟಿಸಲಾಯಿತು' ಎಂದು. ಸತ್ಯವನ್ನು ವಿರೂಪಗೊಳಿಸುವಲ್ಲಿ ಸ್ಟೀಫನ್‌ರ ಅಪಾರ ನೈಪುಣ್ಯವನ್ನು ಕಂಡಿರುವ ನಮಗೆ ಅಚ್ಚರಿಯನ್ನುಂಟು ಮಾಡುವುದು ಇದಲ್ಲ. ವಾಕ್ ಸ್ವಾತಂತ್ರ್ಯದ ಅಧ್ವರ್ಯವೆಂದು ಹೇಳಿಕೊಳ್ಳುವ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆ ಇದನ್ನು ನಾಲ್ಕು ಕಾಲಂನ ಸುದ್ದಿಯಾಗಿ "ಜಿ.ಡಿ.ಆರ್.ನಲ್ಲಿ ಇ.ಎಂ.ಎಸ್. ಭಾಷಣ ಸೆನ್ಸಾರ್" ಎಂಬ ತಲೆಬರಹದೊಂದಿಗೆ ಸ್ಟೀಫನ್‌ರ ಹೇಳಿಕೆಯ ಸತ್ಯಾಂಶವನ್ನು ಪರಿಶೀಲಿಸುವ ಗೋಜಿಗೇ ಹೋಗದೆ ಪ್ರಕಟಿಸಿತು. ಮರುದಿನವೇ ಸ್ಟೀಫನ್‌ರ ಸುಳ್ಳನ್ನು ಬಯಲಿಗೆಳೆಯುವ ಹೇಳಿಕೆಯನ್ನು ಇ.ಎಂ.ಎಸ್. ನವದೆಹಲಿಯಲ್ಲಿ ನೀಡಿದರು. ಅದು ಹೀಗಿದೆ: "ಜರ್ಮನಿಯ ಸಮಾಜವಾದಿ ಐಕ್ಯತಾ ಪಕ್ಷ ಬರ್ಲಿನ್‌ನಲ್ಲಿ ವ್ಯವಸ್ಥೆಗೊಳಿಸಿದ ವೈಜ್ಞಾನಿಕ ಸಮ್ಮೇಳನದಲ್ಲಿ ಭಾಗವಹಿಸಿದ ಕಾಂಗ್ರೆಸ್ ನಿಯೋಗದ ನಾಯಕ ಹಾಗೂ ಎ.ಐ.ಸಿ.ಸಿ. (ಐ)ನ ಪ್ರಧಾನ ಕಾರ್ಯದರ್ಶಿ ಶ್ರೀ ಸಿ. ಎಂ. ಸ್ಟೀಫನ್ ಭಾರತದ ಆಂತರಿಕ ರಾಜಕೀಯದಲ್ಲಿ ಜಿ. ಡಿ. ಆರ್. ನಾಯಕರನ್ನು ಎಳೆದುದಕ್ಕೆ ನನಗೆ ಖೇದವಾಗಿದೆ.

ಸಿ. ಪಿ. ಐ. (ಎಂ)ನ ವಿರುದ್ಧ ತನ್ನ ಪಕ್ಷಪಾತಪೂರ್ಣ ರಾಜಕೀಯವನ್ನು ಪೂರೈಸಿಕೊಳ್ಳುವುದಕ್ಕಾಗಿ ಜಿ.ಡಿ.ಆರ್. ಅಧಿಕಾರಿಗಳು ಅವರ ಭಾಷಣವನ್ನು ಪೂರ್ತಿಯಾಗಿ ಪ್ರಕಟಿಸಿ ನನ್ನ ಭಾಷಣವನ್ನು ಮರೆಮಾಚಿದರು ಎಂದು ಅವರು ಹೇಳಿರುವುದು ಇನ್ನಷ್ಟು ಖೇದದ ವಿಷಯ. ವಾಸ್ತವ ವಿಷಯವೆಂದರೆ ಎಲ್ಲಾ ಭಾಷಣಗಳನ್ನೂ ಜರ್ಮನ್ ಪಕ್ಷದ ಅಧಿಕೃತ ಮುಖಪತ್ರಿಕೆಯಲ್ಲಿ ಚಾಚೂ ತಪ್ಪದೆ ಪ್ರಕಟಿಸಲಾಗಿತ್ತು. ಏಪ್ರಿಲ್ 14ರ ನನ್ನ ಭಾಷಣವನ್ನು ಸಂಪೂರ್ಣವಾಗಿ ಏಪ್ರಿಲ್ 16ರ ಪತ್ರಿಕೆಯಲ್ಲಿ ಪ್ರಕಟಿಸಲಾಯಿತು. ಅದು ಸುಮಾರು ಒಂದು ಪೂರ್ಣಪುಟದಷ್ಟಿತ್ತು. ಇಂತಹ ಏಕ್‌ದಂ ಅಸತ್ಯಪೂರ್ಣ ಹೇಳಿಕೆ ನೀಡುವಷ್ಟು ಕೆಳಮಟ್ಟಕ್ಕೆ ಶ್ರೀ ಸ್ಟೀಫನ್ ಇಳಿದಿರುವುದು ತೀರಾ ಆಶ್ಚರ್ಯಕರ.''

ಇದನ್ನು ಮೊದಲು ಪ್ರಕಟಿಸಿದ ಸುದ್ದಿಯಷ್ಟೇ ಪ್ರಮುಖವಾಗಿ ಪ್ರಕಟಿಸುವ ಬದಲು "ಇಂಡಿಯನ್ ಎಕ್ಸ್‌ಪ್ರೆಸ್" ಈ ಹೇಳಿಕೆಯ ಕೆಲವು ಅಂಶಗಳನ್ನು ಮಾತ್ರ ಅದೂ "ಜಿ.ಡಿ.ಆರ್. ಪಕ್ಷದೊಂದಿಗೆ ಕಾಂಗ್ರೆಸ್ (ಐ) ಸಂಬಂಧದ ಬಗ್ಗೆ ಬಿ. ಜೆ. ಪಿ. ದೂಷಣೆ" ಎಂಬ ತಲೆಬರಹದೊಂದಿಗೆ ಪ್ರಕಟವಾದ ಸುದ್ದಿಯ ಕೊನೆಯಲ್ಲಿ ಪ್ರಕಟಿಸಿತು. ಪತ್ರಿಕೆಯ ವರದಿಯಲ್ಲಿನ ನಿಜವಾದ ದುರುದ್ದೇಶವನ್ನು ಇದು ಸ್ಪಷ್ಟವಾಗಿಸಿದೆ.

ಏಪ್ರಿಲ್ 8 ರಂದು ಬರ್ಲಿನ್ ವಿಮಾನ ನಿಲ್ದಾಣದಲ್ಲಿ ಇಳಿಯುತ್ತಿದ್ದಂತೆ ನನಗೆ ನನ್ನ ಈ ಮೊದಲಿನ ಎರಡು ಭೇಟಿಗಳ ನೆನಪು ಮರುಕಳಿಸಿತು. ಮೊದಲ ಸಲ ಜಿ. ಡಿ. ಆರ್.ನ ಪ್ರಥಮ ಅಧ್ಯಕ್ಷರಾಗಿದ್ದ ವಿಲ್‌ಹೆಲ್ಮ್ ಪಿಕ್‌ರವರ ಅಂತಿಮ ಸಂಸ್ಕಾರದ ಸಂದರ್ಭದಲ್ಲಿ ಅಂದಿನ ಅವಿಭಜಿತ ಭಾರತ ಕಮ್ಯುನಿಸ್ಟ್ ಪಕ್ಷದ ಪ್ರತಿನಿಧಿಯಾಗಿ, ಎರಡನೇ ಬಾರಿ ಬರ್ಲಿನ್‌ನ ಸ್ಟೇಟ್ ಹಾಸ್ಪಿಟಲ್‌ನಲ್ಲಿ ರೋಗಿಯಾಗಿ ಇಲ್ಲಿಗೆ ಬಂದಿದ್ದೆ. ಮೊದಲನೆಯದು ಕೇವಲ 36 ಗಂಟೆಗಳ ಅಲ್ಪ ಸಮಯದ ಭೇಟಿ, ಎರಡನೇ ಬಾರಿ ಬರ್ಲಿನ್‌ನ ಸ್ಟೇಟ್ ಹಾಸ್ಪಿಟಲ್‌ನಲ್ಲಿ ಹಾಗೂ ಬೆಟ್ಟದ ತೀರದ ಆರೋಗ್ಯ ಧಾಮದಲ್ಲಿ ಎರಡು ತಿಂಗಳ ಚಿಕಿತ್ಸೆಯಿಂದ ದೈಹಿಕವಾಗಿ ಪುನಶ್ಚೇತನಗೊಂಡ ಲಾಭದಾಯಕ ಅನುಭವವಾಯಿತು. ವಸ್ತು ಸಂಗ್ರಹಾಲಯಗಳು, ವಿದ್ಯಾಸಂಸ್ಥೆಗಳು, ಕಾರ್ಖಾನೆಗಳು, ಫಾರ್ಮ್‌ಗಳು ಇತ್ಯಾದಿಗಳ ಭೇಟಿಗಳಿಂದ ನಾನು ಮುಗ್ಧಗೊಂಡಿದ್ದೆ. ಮಾರ್ಕ್ಸ್ ಹಾಗೂ ಎಂಗೆಲ್ಸ್ ಚಿತ್ರಿಸಿದ್ದ ಕಾರ್ಮಿಕರ ಪ್ರಥಮ ಜರ್ಮನ್ ಪ್ರಭುತ್ವ ಸ್ಥಾಪನೆಯ ಇಪ್ಪತ್ತನೇ ವಾರ್ಷಿಕೋತ್ಸವದ ಸಂದರ್ಭದ ಭಾರೀ ರ್ಯಾಲಿಯೊಂದಿಗೆ ಈ ಭೇಟಿ ಕೊನೆಗೊಂಡಿತ್ತು.

ಈ ಎರಡೂ ಭೇಟಿಗಳ ಸಮಯದಲ್ಲಿ ಚಾರಿತ್ರಿಕ ಬ್ರಾಂಡೆನ್ ಬರ್ಗ್ ಗೇಟ್‌ನ ಸುತ್ತಮುತ್ತ ತಿರುಗಾಡಿ ಹತ್ತಿದ್ದೆ. ಈ ಗೇಟ್ ಬರ್ಲಿನನ್ನು ಪಶ್ಚಿಮ ಹಾಗೂ ಪೂರ್ವ ಎಂದು ವಿಭಜಿಸುತ್ತದೆ. ಮೊದಲ ಬಾರಿ ಇಲ್ಲಿಗೆ ಬಂದಿದ್ದಾಗ ಈ ನಗರವನ್ನು ವಿಭಜಿಸುವ ಸುಪ್ರಸಿದ್ಧ ಬರ್ಲಿನ್ ಗೋಡೆ ಇನ್ನೂ ನಿರ್ಮಾಣಗೊಂಡಿರಲಿಲ್ಲ. ಎರಡನೇ ಬಾರಿ ಬಂದಾಗ ಅದಾಗಲೇ ನಿರ್ಮಾಣಗೊಂಡಿತ್ತು. ಈ ಸುಂದರ ನಗರವನ್ನು ಮಾತ್ರವಲ್ಲ, ಸಂಪೂರ್ಣ ಜರ್ಮನ್ ದೇಶವನ್ನೇ ಈ ಗೋಡೆ ವಿಭಜಿಸಿದೆ. ವಾಸ್ತವದಲ್ಲಿ ಬಂಡವಾಳಶಾಹಿ ಹಾಗೂ ಸಮಾಜವಾದೀ ಪ್ರಪಂಚಗಳನ್ನಾಗಿ ಇದು ವಿಭಜಿಸಿದೆ.

ಇಂದು ಸಮಸ್ತ ಮಾನವಕುಲಕ್ಕೇ ನ್ಯೂಕ್ಲಿಯರ್ ವಿನಾಶದ ಬೆದರಿಕೆ ಒಡ್ಡಿರುವ ಸಾಮ್ರಾಜ್ಯಶಾಹೀ ಯುದ್ಧಕೋರರು ಉಂಟು ಮಾಡುತ್ತಿರುವ ಅತ್ಯಂತ ಬಿಗುವಿನ ಪರಿಸ್ಥಿತಿಗೆ ಈ ಗೋಡೆ ಹಾಗೂ ದ್ವಾರ ಪ್ರತೀಕವಾಗಿದೆ. ಜರ್ಮನ್ ಜನವಾದಿ ಗಣರಾಜ್ಯದ ಜನತೆಯ ಮಟ್ಟಿಗಂತೂ ಅದು ತಮ್ಮ ದೇಶದಲ್ಲಿ ಬೆಳೆಯುತ್ತಿರುವ ಸಮಾಜವಾದವನ್ನು ನಾಶಗೊಳಿಸ ಬಯಸುವ ಸಂಘೀಯ ಜರ್ಮನ್ ಗಣರಾಜ್ಯ (ಪಶ್ಚಿಮ ಜರ್ಮನಿ)ದ ಹಗೆ ಸಾಧಕರು ಹಾಗೂ ಅವರ ಅಮೇರಿಕನ್ ಗೆಳೆಯರನ್ನು ಸದಾ ನೆನಪಿಸುತ್ತಿರುತ್ತದೆ.

ನನ್ನ ಮೂರನೇ ಭೇಟಿಯ ಕಾಲದಲ್ಲೂ ನನ್ನ ಸಹಯೋಗಿ ರಾಮದಾಸ್ ಹಾಗೂ ನಾನು ನಮ್ಮ ಜರ್ಮನ್ ಸಂಗಾತಿಗಳ ಜೊತೆ (ಇವರಲ್ಲಿ ನಮ್ಮ ಹಳೆಯ ಮಿತ್ರ ಡಾ. ಡಯಟ್ರಿಚ್ ಕೂಡಾ ಇದ್ದರು) ಈ ಪ್ರದೇಶದಲ್ಲಿ ಸುತ್ತಾಡಿದೆವು. ಹಾಗೂ ಬ್ರಾಂಡೆನ್‌ಬರ್ಗ್ ಗೇಟ್‌ನ್ನು ಹತ್ತಿ ಹೋದೆವು. ಆದರೆ ಈ ಭೇಟಿ ಸಾಧಾರಣದ್ದೇನೂ ಆಗಿರಲಿಲ್ಲ; ನಂತರ 48 ಗಂಟೆಗಳೊಳಗೆ ಆರಂಭವಾಗಲಿದ್ದ ಜರ್ಮನಿಯ ಸಮಾಜವಾದಿ ಐಕ್ಯತಾ ಪಕ್ಷ ಸಂಘಟಿಸಿದ "ಕಾರ್ಲ್‌ಮಾರ್ಕ್ಸ್ ಮತ್ತು ನಮ್ಮ ಕಾಲ–ಶಾಂತಿ ಹಾಗೂ ಸಾಮಾಜಿಕ ಪ್ರಗತಿಗಾಗಿ ಹೋರಾಟ'' ಎಂಬ ವಿಷಯದ ಮೇಲೆ ನಡೆಯಲಿದ್ದ ವಿಚಾರ ವಿನಿಮಯಕ್ಕೆ ಪೀಠಿಕೆಯಾಗಿತ್ತು. ಇದರಲ್ಲಿ 111 ದೇಶಗಳ 146 ಪ್ರತಿನಿಧಿ ಮಂಡಲಿಗಳು ಭಾಗವಹಿಸಿದ್ದವು. ಸಾಮ್ರಾಜ್ಯಶಾಹಿಯ ನ್ಯೂಕ್ಲಿಯರ್ ವಿನಾಶಕ್ಕಾಗಿ ಹೂಡುತ್ತಿರುವ ಸಂಚನ್ನು ವಿಫಲಗೊಳಿಸುವುದು ಹೇಗೆ ಎಂಬ ಪ್ರಶ್ನೆ ಈ ವೈಜ್ಞಾನಿಕ ಸಮ್ಮೇಳನದ ಪ್ರಮುಖ ಅಂಶವಾಗಿತ್ತು.

ಕಮ್ಯುನಿಸ್ಟರು, ಸಮಾಜವಾದಿಗಳು, ಸಾಮಾಜಿಕ ಜನತಂತ್ರವಾದಿಗಳು, ರಾಷ್ಟ್ರೀಯ ಕ್ರಾಂತಿಕಾರಿಗಳು ಹಾಗೂ ರಾಷ್ಟ್ರೀಯ ಜನತಂತ್ರವಾದಿಗಳು ಆ ಘನ ಸಭಾಂಗಣದಲ್ಲಿ ನೆರೆದಿದ್ದರು. ಈ ಪಕ್ಷಗಳು ಹಾಗೂ ಗುಂಪುಗಳಲ್ಲಿ ಮೂಲಭೂತವಾದ ಹಲವು ಸಾಮಾಜಿಕಾರ್ಥಿಕ ಹಾಗೂ ರಾಜಕೀಯ ಧೋರಣೆಗಳನ್ನು ಕುರಿತಂತೆ ಪರಸ್ಪರ ಒಮ್ಮತವಿಲ್ಲದಿದ್ದರೂ ವಿನಾಶಕಾರಿ ನ್ಯೂಕ್ಲಿಯರ್ ಯುದ್ಧದೆಡೆಗೆ ಸಾಮ್ರಾಜ್ಯ ಶಾಹಿಯ ಮುನ್ನಡೆಯನ್ನು ತಡೆಯುವ ಅಗತ್ಯದ ಬಗ್ಗೆ, ಸಾಂಪ್ರದಾಯಿಕ ಹಾಗೂ ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳ ಪೈಪೋಟಿ ನಿಲ್ಲಿಸುವ ಬಗ್ಗೆ, ಜಾಗತಿಕ ಶಾಂತಿಯನ್ನು ರಕ್ಷಿಸುವ ಬಗ್ಗೆ ಒಮ್ಮತವಿತ್ತು. ನಮ್ಮ ದೇಶವನ್ನು ಈ ಸಮ್ಮೇಳನದಲ್ಲಿ ಎರಡು ಕಮ್ಯುನಿಸ್ಟ್ ಪಕ್ಷಗಳು – ಸಿ. ಪಿ. ಐ. ಹಾಗೂ ಸಿ. ಪಿ. ಐ. (ಎಂ)- ಮತ್ತು ಆಳುವ ಕಾಂಗ್ರೆಸ್ (ಐ) ಪಕ್ಷ ಪ್ರತಿನಿಧಿಸಿದ್ದವು.

ಸಮ್ಮೇಳನಕ್ಕೆ ಈ ಮೂರು ಪ್ರತಿನಿಧಿ ಮಂಡಲಿಗಳ ಕೊಡುಗೆಯನ್ನು ಪರಿಶೀಲಿಸಿದರೆ ಸಾಮಾಜಿಕ ಪ್ರಗತಿಗೆ ಸಂಬಂಧಪಟ್ಟಂತೆ ಮೂಲಭೂತ ಮಹತ್ವದ ಪ್ರಶ್ನೆಗಳ ಬಗ್ಗೆ ಆಳುವ ಹಾಗೂ ಎಡವಿರೋಧಿ ಪಕ್ಷಗಳ ನಡುವೆ ಕೂಡಾ ಇರುವ ವ್ಯತ್ಯಾಸಗಳನ್ನು ಕಾಣಬಹುದು. ಸಿ. ಪಿ. ಐ. (ಎಂ) ತನ್ನ ಪಕ್ಷದ ಕಾರ್ಯಕ್ರಮಾತ್ಮಕ ನಿಲುವನ್ನು, ಭಾರತದ ಪರಿಸ್ಥಿತಿಯಲ್ಲಿ 'ರಾಷ್ಟ್ರೀಯ ಪ್ರಜಾಪ್ರಭುತ್ವ'ದ ಪರಿಕಲ್ಪನೆ ಒಂದು ಪರಿಷ್ಕರಣವಾದಿ ಪರಿಕಲ್ಪನೆಯಾಗುತ್ತದೆ ಎಂದು ತಿಳಿಸಿತು.

ಆದರೆ ಶಾಂತಿಗಾಗಿ ಹೋರಾಟಕ್ಕೆ ಸಂಬಂಧಪಟ್ಟಂತೆ ಬಹಳಷ್ಟು ಒಮ್ಮತವಿದೆ. ಸಿ.ಪಿ.ಐ. (ಎಂ)ನ ಹನ್ನೊಂದನೇ ಅಧಿವೇಶನದ ರಾಜಕೀಯ ನಿರ್ಣಯದಲ್ಲಿ ಹೇಳಿದಂತೆ "ವಿದೇಶಾಂಗ ಧೋರಣೆಯ ಹಲವು ಪ್ರಶ್ನೆಗಳ ಬಗ್ಗೆ ಇಂದಿರಾಗಾಂಧಿ ಸರಕಾರ ಸರಿಯಾದ ನಿಲುವು ತಳೆಯುತ್ತದೆ" ಎಡ ವಿರೋಧಿ ಪಕ್ಷಗಳನ್ನು ಹಾಗೂ ಬಿ. ಜೆ. ಪಿ. ಮತ್ತು ಜನತಾದಂತಹ ಪಕ್ಷಗಳನ್ನು ಬೇರ್ಪಡಿಸುವ ಅಂಶ ಇದೇನೇ.

ಸಮ್ಮೇಳನವನ್ನು ಏರ್ಪಡಿಸಿದವರು ಸಮ್ಮೇಳನದಲ್ಲಿ ಭಾಗವಹಿಸಿದವರನ್ನು "ಕಮ್ಯುನಿಸ್ಟರು, ಸೋಶಲಿಸ್ಟರು, ಸಾಮಾಜಿಕ ಜನತಂತ್ರವಾದಿಗಳು, ರಾಷ್ಟ್ರೀಯ ಕ್ರಾಂತಿಕಾರಿಗಳು ಹಾಗೂ ರಾಷ್ಟ್ರೀಯ ಜನತಂತ್ರವಾದಿಗಳು" ಎಂದು ವಿಂಗಡಿಸಿರುವುದು ಮಹತ್ವಪೂರ್ಣವಾಗಿದೆ. ಇದು ಈ ಸಮ್ಮೇಳನದಲ್ಲಿ ಭಾಗವಹಿಸಿದ ಮಾತ್ರಕ್ಕೆ ಒಂದು ಪಕ್ಷ ಕಮ್ಯೂನಿಸ್ಟ್, ಸೋಶಲಿಸ್ಟ್ ಅಥವಾ ಮೇಲೆ ಹೇಳಿದ ಇನ್ನಾವುದೋ ವಿಧಕ್ಕೆ ಸೇರಿ ಬಿಡುವುದಿಲ್ಲ ಎಂದು ತೋರಿಸಿ ಕೊಡುತ್ತದೆ. ಈ ದೇಶಗಳಲ್ಲಿ ಹಾಗೂ ಬೇರೆ ದೇಶಗಳಲ್ಲಿ ಜನ ಈ ಸಮ್ಮೇಳನದಲ್ಲಿ ಭಾಗವಹಿಸಿದ ಪಕ್ಷಗಳು ಕಮ್ಯುನಿಸ್ಟೋ, ಸೋಶಲಿಸ್ಟೋ ಎಂದಿತ್ಯಾದಿಯಾಗಿ ನಿರ್ಣಯಿಸುವುದು. ಆ ಪಕ್ಷಗಳು ತಮ್ಮ ದಿನನಿತ್ಯದ ಚಟುವಟಿಕೆಗಳನ್ನು ಯಾವ ರೀತಿ ನಿರ್ವಹಿಸುತ್ತದೆ ಎಂಬುದರ ಮೇಲೇನೇ ಹೊರತು ಕೇವಲ ಈ ಸಮ್ಮೇಳನದಲ್ಲಿ ಭಾಗವಹಿಸಿತು ಎಂಬ ಕಾರಣಕ್ಕಾಗಿ ಅಲ್ಲ.

ಸಮ್ಮೇಳನದಲ್ಲಿ ಭಾಗವಹಿಸಿದ ಪ್ರತಿಯೊಂದು ಪಕ್ಷ ಯಾವ ವಿಧಕ್ಕೆ ಸೇರಿದೆ ಎಂಬ ಜರ್ಮನಿಯ ಸಮಾಜವಾದಿ ಐಕ್ಯತಾ ಪಕ್ಷಕ್ಕೆ ತನ್ನದೇ ಆದ ಮೌಲ್ಯಮಾಪನವಿದ್ದರೂ, ಯಾವುದೇ ಪಕ್ಷ ತನ್ನ ಬಗ್ಗೆ ನಡೆಸಿಕೊಂಡಿರುವ ಮೌಲ್ಯಮಾಪನವನ್ನು ತಾವು ಪ್ರಶ್ನಿಸುವುದಿಲ್ಲ ಎಂದು ಜರ್ಮನಿಯ ಪಕ್ಷದ ವಕ್ತಾರರೊಬ್ಬರು ನಮಗೆ ತಿಳಿಸಿದರು.

ಏನೇ ಆಗಲಿ ಈ ರೀತಿಯ ವಿಂಗಡಣೆ ಸಮ್ಮೇಳನದ ಕಾರ್ಯಕಲಾಪಗಳಲ್ಲಿ ಯಾವುದೇ ರೀತಿಯ ಮಹತ್ವ ಹೊಂದಿರಲಿಲ್ಲ. ಯಾಕೆಂದರೆ ಪ್ರತಿಯೊಬ್ಬ ಪ್ರತಿನಿಧಿಗೂ ಚರ್ಚೆಯಲ್ಲಿ ಪಾಲ್ಗೊಳ್ಳಲು ಸಮಾನ ಅವಕಾಶವಿತ್ತು. ಸಮ್ಮೇಳನವನ್ನು ಉದ್ಘಾಟಿಸಿ ಒಂದು ಗಂಟೆಗಳಿಗೂ ಹೆಚ್ಚು ಕಾಲ ಮಾತನಾಡಿದ ಸಮಾಜವಾದಿ ಐಕ್ಯತಾ ಪಕ್ಷದ ಅಧ್ಯಕ್ಷ ಎರಿಕ್‌ಹೊನೆಕರ್ ಅವರನ್ನು ಬಿಟ್ಟರೆ ಎಲ್ಲಾ ಪ್ರತಿನಿಧಿ ಮಂಡಲಿಗಳ ನಾಯಕರನ್ನು 15 ನಿಮಿಷಗಳಿಗಿಂತ ಹೆಚ್ಚು ಮಾತನಾಡಬಾರದೆಂದು ಕೇಳಿಕೊಳ್ಳಲಾಗಿತ್ತು.

ಈ ಭಾಷಣಗಳ ಇಮ್ಮಡಿಯಷ್ಟರವರೆಗೆ ದೀರ್ಘವಾಗಿರಬಹುದಾದ ಭಾಷಣಗಳನ್ನು ಬರೆದುಕೊಡಲು ಕೂಡಾ ಎಲ್ಲಾ ಪ್ರತಿನಿಧಿ ಮಂಡಲಿಗಳಿಗೆ ಆಹ್ವಾನ ನೀಡಲಾಗಿತ್ತು. ಇವೆಲ್ಲವನ್ನೂ ಸಮಾಜವಾದಿ ಐಕ್ಯತಾ ಪಕ್ಷದ ಅಧಿಕೃತ ಮುಖಪತ್ರಿಕೆ "ನೋಯೆಸ್ ಡ್ಯಾಟ್‌ಲಾಂಡ್" [ನವ ಜರ್ಮನಿ]ನಲ್ಲಿ ಏನೊಂದೂ ವ್ಯತ್ಯಾಸವಿಲ್ಲದೆ ಪ್ರಕಟಿಸಲಾಯಿತು.

146ರಲ್ಲಿ ಐದು ಪ್ರತಿನಿಧಿ ಮಂಡಲಿಗಳು ತಮ್ಮದೇ ಆದ ಕಾರಣಗಳಿಗಾಗಿ ಸಮ್ಮೇಳನದಲ್ಲಿ ಭಾಷಣ ಮಾಡಲಿಲ್ಲ. ಆದರೆ ತಮ್ಮ ಭಾಷಣಗಳನ್ನು ಬರೆದುಕೊಟ್ಟಿದ್ದರು. ಅವನ್ನೂ ಜರ್ಮನ್ ಪಕ್ಷದ ಮುಖಪತ್ರದಲ್ಲಿ ಪ್ರಕಟಿಸಲಾಯಿತು.

ಸಿ. ಪಿ. ಐ. (ಎಂ) ಪ್ರತಿನಿಧಿ ಮಂಡಲದ ನಾಯಕನಾಗಿ ಈ ಲೇಖಕನೂ, 15 ನಿಮಿಷಗಳ ಭಾಷಣ ಮಾಡಿದ್ದು, ಬರೆದುಕೊಟ್ಟಿದ್ದ ಭಾಷಣದಲ್ಲಿನ ವಿಪುಲ ಉದ್ಧರಣೆಗಳೊಂದಿಗೆ "ನೋಯೆಸ್ ಡ್ಯಾಟ್‌ಲಾಂಡ್"ನಲ್ಲಿ ಅದನ್ನು ಮುದ್ರಿಸಲಾಯಿತು. ಇದರಲ್ಲಿ ಸಿ. ಪಿ. ಐ. (ಎಂ) ಬಲ ಹಾಗೂ ಎಡ ಸಂದರ್ಭಸಾಧಕ ತಪ್ಪುತಿರುವುಗಳ ಹಾಗೂ ವಿಕೃತಿಗಳ ವಿರುದ್ಧ ಹೋರಾಡುತ್ತಾ ಭಾರತದ ಪರಿಸ್ಥಿತಿಗೆ ಮಾರ್ಕ್ಸ್‌ವಾದ - ಲೆನಿನ್‌ವಾದವನ್ನು ಅನ್ವಯಿಸಲು ಪ್ರಯತ್ನಿಸುತ್ತಾ ಇದೆ ಎಂದು ಸ್ಪಷ್ಟಪಡಿಸಲಾಗಿತ್ತು.

ಭಾಗವಹಿಸಿದವರಲ್ಲಿ ಬಹುಸಂಖ್ಯಾತರು "ಕಮ್ಯುನಿಸ್ಟರು" ವಿಧಕ್ಕೆ ಸೇರಿ

(6ನೇ ಪುಟ ನೋಡಿ)

ಬರ್ಲಿನ್ ಸಮ್ಮೇಳನ

(5ನೇ ಪುಟದಿಂದ)

ದವರಾಗಿದ್ದರು ಎಂಬುದು ನಿಜ. ಶಾಂತಿ ಹಾಗೂ ಸಾಮಾಜಿಕ ಪ್ರಗತಿಗಾಗಿ ಹೋರಾಡುವ ಅಂತರ್ರಾಷ್ಟ್ರೀಯ ಸೇನೆಯಲ್ಲಿ ಕಮ್ಯುನಿಸ್ಟರದ್ದೇ ಅತೀ ದೊಡ್ಡ ತುಕಡಿ ತಾನೇ. ಆದರೆ ಜಾಗತಿಕ ಕಮ್ಯೂನಿಸ್ಟ್ ಚಳುವಳಿಯ ಎಲ್ಲರೂ ಅದರಲ್ಲಿ ಭಾಗವಹಿಸಿರಲಿಲ್ಲ. ಚೀಣಾ ಹಾಗೂ ಅಲ್ಬೇನಿಯಾದ ಕಮ್ಯುನಿಸ್ಟ್ ಪಕ್ಷಗಳು ಬಂದಿರಲಿಲ್ಲ. ಭಾಗವಹಿಸಿದ ಕಮ್ಯೂನಿಸ್ಟ್ ಪಕ್ಷಗಳೂ ಕೂಡಾ ಪರಸ್ಪರ ಭಿನ್ನಾಭಿಪ್ರಾಯಗಳಿಲ್ಲದೇ ಒಂದೇ ಪ್ರವೃತ್ತಿಯ ಪಕ್ಷಗಳಾಗಿರಲಿಲ್ಲ

ಉದಾಹರಣೆಗೆ ಪ್ರಸ್ತುತ ಪರಿಸ್ಥಿತಿಗಳಲ್ಲಿ ಕಾರ್ಮಿಕ ವರ್ಗದ ಸರ್ವಾಧಿಕಾರ, ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯತೆ ಹಾಗೂ ಪ್ರಜಾಸತ್ತಾತ್ಮಕ ಕ್ರಾಂತಿಯಲ್ಲಿ ಕಾರ್ಮಿಕ ವರ್ಗದ ಪಕ್ಷದ ಮುಂದಾಳತ್ವದ ಪಾತ್ರ ಎಂಬ ಮೂರು ಪರಿಕಲ್ಪನೆಗಳನ್ನು ಒಟ್ಟಾಗಿ ಅಥವಾ ಇವುಗಳಲ್ಲಿ ಯಾವುದಾದರೊಂದನ್ನು ಅನ್ವಯಿಸಲು ಆಗುವುದಿಲ್ಲ ಎಂದು ಯೋಚಿಸುವ ಪಕ್ಷಗಳಿದ್ದವು. ಇತರ ಪಕ್ಷಗಳು (ಇವುಗಳಲ್ಲಿ ಸಿ.ಪಿ.ಐ.(ಎಂ) ಕೂಡಾ ಸೇರಿದೆ) ಈ ಪರಿಕಲ್ಪನೆಗಳಿಗೆ ದೃಢವಾಗಿ ಬದ್ಧವಾಗಿದ್ದು ಅವುಗಳನ್ನು ತ್ಯಜಿಸಿದರೆ ಮಾರ್ಕ್ಸ್‌ವಾದದಿಂದ ದೂರ ಸರಿದಂತೆ ಎಂದು ಭಾವಿಸುತ್ತದೆ.

ಇವರಲ್ಲದೆ ಒಂದೇ ಸಮನಾದ ರೀತಿಯಲ್ಲಿ ಮಾರ್ಕ್ಸ್‌ವಾದೀ – ಲೆನಿನ್‌ವಾದೀ ನಿಲವುಗಳತ್ತ ಚಲಿಸುತ್ತಿರುವ ಸಮಾಜವಾದಿಗಳು, ಸಾಮಾಜಿಕ ಪ್ರಜಾಪ್ರಭುತ್ವವಾದಿಗಳು ಹಾಗೂ ರಾಷ್ಟ್ರೀಯ ಕ್ರಾಂತಿಕಾರಿಗಳೂ ಬಂದಿದ್ದರು.

ಇವರೆಲ್ಲರ ಪರಸ್ಪರ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿ ಒಮ್ಮತಾಭಿಪ್ರಾಯ ಎಂದು ಏನನ್ನಾದರೂ ಅದನ್ನು ಮೂಡಿಸುವುದು ಬರ್ಲಿನ್ ಸಮ್ಮೇಳನದ ಉದ್ದೇಶವಾಗಿರಲಿಲ್ಲ. ಅದು ಪ್ರತಿಯೊಬ್ಬ ಪ್ರತಿನಿಧಿಗೂ ತನ್ನ ನಿಲುವನ್ನು ಮಂಡಿಸಲು ಅವಕಾಶ ನೀಡಿತು. ಮೂಡಿ ಬಂದ ಒಮ್ಮತಾಭಿಪ್ರಾಯ ಶಾಂತಿಗಾಗಿ ಹಾಗೂ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟದ ಮಹತ್ವಕ್ಕಷ್ಟೇ ಸೀಮಿತಗೊಂಡಿತ್ತು.

ಆದರೂ ಈ ಸಮ್ಮೇಳನ ಬರ್ಲಿನ್‌ನಲ್ಲಿ ಸೇರಿದ್ದ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಪಕ್ಷಗಳಿಗೆ ಪರಸ್ಪರ ಅಭಿಪ್ರಾಯಗಳ ವಿನಿಮಯಕ್ಕೆ ಅವಕಾಶ ಮಾಡಿಕೊಟ್ಟು ಪರಸ್ಪರರನ್ನ ಇನ್ನೂ ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಅನುವಾಯಿತು.

ಆರು ದಿನಗಳ ಕಾಲ—ಏಪ್ರಿಲ್ 11ರಿಂದ 16ರವರೆಗೆ—ನಡೆದ ವಿಚಾರ ವಿನಿಮಯದಲ್ಲಿ ಭಾಗವಹಿಸಿದ ಎಲ್ಲಾ ಪ್ರತಿನಿಧಿಗಳಿಗೆ, ವಿಶೇಷವಾಗಿ ಮಾರ್ಕ್ಸ್‌ವಾದಿ – ಲೆನಿನ್‌ವಾದಿಗಳಿಗೆ ಇದು, ಸಂಕ್ಷಿಪ್ತದಲ್ಲಿ ಹೇಳುವುದಾದರೆ, ಫಲದಾಯಕವಾಗಿತ್ತು. ಶಾಂತಿಯ ಹೋರಾಟದಲ್ಲಿ ಅದು ಅವರೆಲ್ಲರನ್ನು ಮತ್ತಷ್ಟು ದೃಢಗೊಳಿಸಿದರೆ, ಪ್ರತಿಯೊಂದು ಪಕ್ಷವೂ ಸಾಮಾಜಿಕ ಪ್ರಗತಿಗೆ ಸಂಬಂಧಿಸಿದಂತೆ ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಬಗ್ಗೆ ಪರಸ್ಪರ ಇನ್ನಷ್ಟು ಅರಿವು ಮೂಡಿತು. ಆದ್ದರಿಂದ ಸಮ್ಮೇಳನದಲ್ಲಿ ಭಾಗವಹಿಸಿದ ಪ್ರತಿಯೊಬ್ಬರೂ ಈ ಸಮ್ಮೇಳನವನ್ನು ಸಂಘಟಿಸುವಲ್ಲಿನ ರಾಜಕೀಯ ಉಪಕ್ರಮಕ್ಕಾಗಿ, ಪ್ರಧಾನ ಕಾರ್ಯದರ್ಶಿಗಳ ವಿಚಾರ ಪ್ರಚೋದಕ ಉದ್ಘಾಟನಾ ಭಾಷಣಕ್ಕಾಗಿ, ವಿಚಾರ ವಿನಿಮಯದಲ್ಲಿ ಪ್ರತಿಯೊಬ್ಬ ಪ್ರತಿನಿಧಿಗೂ ಸಮಾನ ಅವಕಾಶ ಒದಗಿಸಿದ್ದಕ್ಕಾಗಿ ಹಾಗೂ ಪ್ರತಿಯೊಬ್ಬನ ಊಟ–ಉಪಚಾರಗಳ ಉತ್ತಮ ವ್ಯವಸ್ಥೆಗಾಗಿ ಜರ್ಮನಿಯ ಸಮಾಜವಾದಿ ಐಕ್ಯತಾ ಪಕ್ಷಕ್ಕೆ ಹಾಗೂ ಅದರ ಕೇಂದ್ರ ಸಮಿತಿಗೆ ಕೃತಜ್ಞರಾಗಿದ್ದಾರೆ.

ಕಾರ್ಮಿಕ ವರ್ಗ ಮತ್ತು ಹಳ್ಳಿಯ ಬಡವರು

(4ನೇ ಪುಟದಿಂದ)

ಸದಸ್ಯರನ್ನು ಸೇರಿಸಿ ಸಂಘಟಿತ ಹೋರಾಟ ಮತ್ತು ವ್ಯಾಪಕವಾದ ಚಟುವಟಿಕೆಗಳ ಮೂಲಕ ಬಲಿಷ್ಠವಾದ ಸಂಘಟನೆಯನ್ನು ಬೆಳಸಬೇಕು. ತೀರಾ ಹಿಂದುಳಿದಿರುವ, ಹಳೆಯ ಊಳಿಗಮಾನ್ಯ ಪದ್ಧತಿಯ ಮೌಲ್ಯಗಳೇ ಜಾಸ್ತಿ ಇರುವ ಗ್ರಾಮೀಣ ಪ್ರದೇಶದಲ್ಲಿ ವೈಜ್ಞಾನಿಕ ಮನೋಗತಿಯನ್ನೂ, ಕಾರ್ಮಿಕ ವರ್ಗದ ಸಿದ್ಧಾಂತವನ್ನೂ, ಹೊಸ ಮೌಲ್ಯಗಳನ್ನೂ ಜನತೆಯ ಮಧ್ಯೆ ಕೊಂಡೊಯ್ಯುವುದಕ್ಕೆ ತುಂಬಾ ಶ್ರಮವಹಿಸಿ ಪ್ರಜ್ಞಾಪೂರ್ವಕವಾಗಿ ಕೆಲಸ ಮಾಡಬೇಕು. ಈಗ ಇವನ್ನೆಲ್ಲಾ ನಾವು ಮಾಡುತ್ತಿರುವೆವು ಎಂದು ಹೇಳುವಂತಿಲ್ಲ.

ರೈತ ಮತ್ತು ಕಾರ್ಮಿಕರ ಸಖ್ಯತೆಗಾಗಿ ಶ್ರಮಿಸುವಾಗಲೇ ಇತರೆ ಜನವಿಭಾಗಗಳನ್ನೂ ಸಂಘಟಿಸಿ ಅವನ್ನೂ ಕಾರ್ಮಿಕ ವರ್ಗದ ಸಿದ್ಧಾಂತದ ಪ್ರಭಾವದಡಿಗೂ, ಕಾರ್ಮಿಕ ಮತ್ತು ರೈತರ ಸಖ್ಯತೆಯ ಸಮೀಪಕ್ಕೆ ಬರುವಂತೆಯೂ ಮಾಡಲು ಪ್ರಯತ್ನಿಸಬೇಕು. ಒಂದು ವಿಭಾಗವನ್ನು ಸಂಘಟಿಸುವಾಗ ಇತರೆ ವಿಭಾಗಗಳ ಸಂಘಟನೆಗಳನ್ನು ಬೆಳೆಸಿ ಒಂದು ಇನ್ನೊಂದಕ್ಕೆ ಪೂರಕವಾಗುವಂತೆ ಮಾಡುವುದಕ್ಕೂ ಗಮನವೀಯಲೇ ಬೇಕು. ವರ್ಗ ಹೋರಾಟವನ್ನು ಕೇವಲ ಆರ್ಥಿಕ ಬೇಡಿಕೆಗಳ ಈಡೇರಿಕೆಗಾಗಿ ನಡೆಸುವ ಹೋರಾಟದ ಮಟ್ಟಕ್ಕಿಳಿಸದೆ ಅದನ್ನು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಸೈದ್ಧಾಂತಿಕ ಮತ್ತು ರಾಜಕೀಯ ಮಟ್ಟದಲ್ಲಿ ನಡೆಸಬೇಕು. ಇವನ್ನೆಲ್ಲಾ ನೆನಪಿನಲ್ಲಿಟ್ಟುಕೊಂಡು ಇನ್ನೂ ಹೆಚ್ಚಿನ ಪರಿಶ್ರಮದಿಂದ ಕೆಲಸ ಮಾಡುತ್ತಾ ನಮ್ಮನ್ನಗಲಿ ನೂರು ವರ್ಷಗಳಾದ ಮಹಾಕ್ರಾಂತಿ ಪುರುಷ ಮಾರ್ಕ್ಸ್ ತೋರಿಸಿದ ದಾರಿಯಲ್ಲಿ ಮುನ್ನಡೆಯೋಣ. ಮೇ ದಿನದ ಸಂದೇಶವನ್ನು ಸಾರುತ್ತಾ ಕಾರ್ಮಿಕ ವರ್ಗವನ್ನು ಒಗ್ಗೂಡಿಸುತ್ತಾ ಸಮಾಜವಾದದ ದಿಕ್ಕಿನತ್ತ ಸಾಗಲು ಪ್ರತಿಜ್ಞೆಗೈಯ್ಯೋಣ.

ಹರಪನಹಳ್ಳಿಯಲ್ಲಿ ರೈತರ ಬೃಹತ್ ಮೆರವಣಿಗೆ

ದಿನಾಂಕ 3–6–83ರಂದು ಹರಪನಹಳ್ಳಿ ತಾಲ್ಲೂಕಿನ ಹಳ್ಳಿಗಳಾದ ಶಿಂಗ್ರಿಹಳ್ಳಿ, ಹಳ್ಳಿಕೆರೆ, ನಾಗಲಾಪುರ ತಾಂಡ, ಗಂಗೇನಹಟ್ಟಿಗಳಿಂದ ಹಳ್ಳಿಗಳನ್ನು ಭಾದಿಸುತ್ತಿರುವ ಸಮಸ್ಯೆಗಳಿಗೆ ಹಳ್ಳಿಯ ರೈತರು ಸಂಘಟಿತರಾಗಿ ಕರ್ನಾಟಕ ಪ್ರಾಂತ ರೈತ ಸಂಘವನ್ನು ಸ್ಥಾಪನೆಮಾಡಿ ತಮ್ಮ ಸಮಸ್ಯೆಗಳನ್ನು ಪಟ್ಟಿಮಾಡಿ ಕುಡಿಯುವ ನೀರಿನ ಸಮಸ್ಯೆ, ಮನೆಗಳ ಸಮಸ್ಯೆ, ವಾಹನ ಸೌಕರ್ಯ, ವಿದ್ಯುತ್ ದೀಪ ಪಶು ವೈದ್ಯ ಆಸ್ಪತ್ರೆ ಇನ್ನು ಮುಂತಾದವುಗಳೊಂದಿಗೆ ಹಳ್ಳಿಗಳ ಬಡ ರೈತರು ಹಾಗೂ ಕೃಷಿಕೂಲಿಕಾರರು ಸುಮಾರು 60 ಕಿ. ಮೀ ದೂರದಿಂದ ಉರಿ ಬಿಸಿಲಿನಲ್ಲಿ ಸುಮಾರು 400 ರೈತರು ಹರಪನಹಳ್ಳಿಗೆ ಕಾಲು ನಡಿಗೆ ಜಾಥಾಮಾಡಿ ತಹಸಿಲ್ದಾರ್‌ರವರಿಗೆ ಮನವಿ ಸಲ್ಲಿಸಿದರು. ಜಾಥಾದ ನೇತೃತ್ವವನ್ನು ಕಾ| ಬಿ. ಪರಶುರಾಮ ವಹಿಸಿದ್ದರು. ಮನವಿ ಸಲ್ಲಿಸಿದ ನಂತರ ಅಧಿಕಾರಿಗಳೊಂದಿಗೆ ಚರ್ಚಿಸಿ ತಮ್ಮ ಸಮಸ್ಯೆಗಳಿಗೆ ಒಂದು ತಿಂಗಳ ಅವಧಿಯಲ್ಲಿ ಪರಿಹಾರಒದಗಿಸದೇ ಇದ್ದಲ್ಲಿ ಉಪವಾಸ ಸತ್ಯಾಗ್ರಹಕ್ಕೆ ಕೂಡುತ್ತೇವೆಂದು ತಹಸಿಲ್ದಾರ್‌ರವರಿಗೆ ಎಚ್ಚರಿಕೆ ಕೊಟ್ಟು ನಂತರ ಸ್ಥಳೀಯ ಎಂ. ಎಲ್. ಎ. ರವರಿಗೂ ಸಹ ಮನವಿ ಸಲ್ಲಿಸಲಾಯಿತು. ಎಂ. ಎಲ್. ಎ. ರವರು ತುರ್ತು ಪರಿಹಾರ ಒದಗಿಸಿಕೊಡುವುದಾಗಿ ಆಶ್ವಾಸನೆ ಕೊಟ್ಟರು. ನಂತರ ರೈತರು ಮುಖ್ಯ ಬೀದಿಯಲ್ಲಿ ಘೋಷಣೆಗಳನ್ನು ಕೂಗುತ್ತಾ ತೆಗ್ಗಿನ ಮಠದ ಸ್ವಾಮಿ ಮೈದಾನದಲ್ಲಿ ಬಹಿರಂಗ ಸಭೆಯನ್ನು ನಡೆಸಿದರು.

ಸಭೆಯನ್ನುದ್ದೇಶಿಸಿ ಕಾ| ಎಸ್. ಎಂ. ಕೊಟ್ರಯ್ಯ, ಕಾ| ಬಿ. ಪರಶುರಾಮ ಮುಂತಾದವರು ಮಾತನಾಡಿದರು. ನಂತರ ಕಾ| ದುರುಗಪ್ಪ ವಂದಿಸಿದರು.

ಐ. ಎಲ್. ಓ. ಗೆ ಹೋದ ನಿಯೋಗ ಪ್ರಾತಿನಿಧಿಕವಾಗಿಲ್ಲ

ಜಿನೀವಾದಲ್ಲಿ ಜೂನ್ 1ರಿಂದ 22ರ ವರೆಗೆ ನಡೆಯುತ್ತಲಿರುವ ಅಂತರ್ರಾಷ್ಟ್ರೀಯ ಕಾರ್ಮಿಕ ಸಮ್ಮೇಳನ [ಐ.ಎಲ್.ಓ.]ದ 69ನೇ ಅಧಿವೇಶನದಲ್ಲಿ ಭಾಗವಹಿಸಬೇಕಾಗಿದ್ದ ಭಾರತದ ಕಾರ್ಮಿಕರ ನಿಯೋಗದ ಕುರಿತು ಒಮ್ಮತಕ್ಕೆ ಬರಲು ಕೇಂದ್ರ ಕಾರ್ಮಿಕ ಸಂಘಟನೆಗಳಿಗೆ ಏಕೆ ಸಾಧ್ಯವಾಗಲಿಲ್ಲ ಎಂಬುದಕ್ಕೆ ಇಂಟಕೇತರ ಕಾರ್ಮಿಕ ಸಂಘಟನೆಗಳು ಮೇ 29ರಂದು ನವದೆಹಲಿಯಲ್ಲಿ ನೀಡಿದ ಪತ್ರಿಕಾ ಹೇಳಿಕೆಯೊಂದರಲ್ಲಿ ವಿವರಣೆ ನೀಡಿವೆ.

ಈ ಬಗ್ಗೆ ಹಲವು ಸಲ ಮಾತುಕತೆಗಳು ನಡೆದವು. ಇಂಟಕ್‌ನ ಪ್ರತಿನಿಧಿಯನ್ನು ನೇಮಿಸಲು ಒಪ್ಪಬೇಕಾದರೆ ಬದಲೀ ಪ್ರತಿನಿಧಿಯೊಬ್ಬರು ಇಂಟಕೇತರ ಕಾರ್ಮಿಕ ಸಂಘಗಳಿಗೆ ಸೇರಿದವರಾಗಿದ್ದು ಅಧಿವೇಶನದಲ್ಲಿ ಅರ್ಧದಷ್ಟು ಅವಧಿಯಲ್ಲಿ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸಲು ಅವಕಾಶವಿರಬೇಕೆಂದು ಸೂಚಿಸಲಾಯಿತು. ಮೊದಲು ಇಂಟಕ್ ಇದಕ್ಕೆ ಒಪ್ಪಿದರೂ, ನಂತರ ಈ ಸೂಚನೆಯನ್ನು ಅದು ತಿರಸ್ಕರಿಸಿತು. ಅದರ ತಪ್ಪು ನಿಲುವಿನಿಂದಾಗಿ ಒಂದು ಒಮ್ಮತಕ್ಕೆ ಬರಲು ಸಾಧ್ಯವಾಗಲಿಲ್ಲ. ಇದರಲ್ಲಿ ಭಾರತ ಸರ್ಕಾರದ ನಕಾರಾತ್ಮಕ ನಿಲುವು ಇಂಟಕ್ ಈ ರೀತಿ ಐ. ಎಲ್. ಓ. ಸಂವಿಧಾನವನ್ನು ದುರುಪಯೋಗಪಡಿಸಿಕೊಳ್ಳಲು ನೆರವಾಯಿತು ಎಂಬುದರ ಬಗ್ಗೆ ಪತ್ರಿಕಾ ಹೇಳಿಕೆಯಲ್ಲಿ ಖೇದ ವ್ಯಕ್ತಪಡಿಸಲಾಗಿದೆ.

ಐ. ಎಲ್. ಓ.ಗೆ ಹೋಗಿರುವ ಕಾರ್ಮಿಕ ನಿಯೋಗ ಭಾರತದ ಕಾರ್ಮಿಕ ವರ್ಗದ ಬಹುಸಂಖ್ಯಾ ವಿಭಾಗವನ್ನು ಪ್ರತಿನಿಧಿಸುತ್ತಿಲ್ಲ ಎಂದು ಸಿ. ಐ. ಟಿ. ಯು., ಎ. ಐ. ಟಿ. ಯು. ಸಿ, ಎಚ್.ಎಂ.ಎಸ್., ಯು.ಟಿ.ಯು.ಸಿ. ಹಾಗೂ ಯು.ಟಿ.ಯು.ಸಿ. (ಲೆನಿನ್ ಸರಣಿ) ನೀಡಿರುವ ಈ ಜಂಟೀ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಡಿ. ವೈ. ಎಫ್. ಐ. ಶಾಖೆಯ ಉದ್ಘಾಟನೆ

ತಾ|| 7–6–1983ರಂದು ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡ ಬೆಳವಂಗಲ ಹೋಬಳಿ ಮಟ್ಟದ ಯುವಜನರ ಸಭೆಯು ಚಿಕ್ಕ ಬೆಳವಂಗಲ ಗ್ರಾಮದಲ್ಲಿ ನಡೆಯಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಜಿಲ್ಲಾ ಸಂಘಟನಾ ಸಮಿತಿಯ ಸದಸ್ಯರಾದ ಕಾ| ಜಯಶೇಖರ್‌ರವರು ಡಿ. ವೈ. ಎಫ್.ಐ.ನ ಕಾರ್ಯಕ್ರಮ, ಧ್ಯೇಯೋದ್ದೇಶಗಳನ್ನು ಹಾಗೂ 26–6–83ರಂದು ದೊಡ್ಡಬಳ್ಳಾಪುರದಲ್ಲಿ ನಡೆಯುವ ತಾಲ್ಲೂಕ್ ಮಟ್ಟದ ಸಮ್ಮೇಳನದ ಬಗ್ಗೆ ಹೇಳಿ ಯಶಸ್ವೀ ಮಾಡಬೇಕೆಂದು ವಿನಂತಿಸಿಕೊಂಡರು.

ನಂತರ ಹೋಬಳಿ ಮಟ್ಟದ ಸಂಘಟನಾ ಸಮಿತಿಯನ್ನು ರಚಿಸಲಾಯಿತು. ಕಾ| ವೀರೇಗೌಡರನ್ನು ಅಧ್ಯಕ್ಷರನ್ನಾಗಿಯೂ, ಸಿ. ಆರ್. ತಿಮ್ಮೇಗೌಡರು ಉಪಾಧ್ಯಕ್ಷರಾಗಿಯೂ, ಓಂಕಾರಸ್ವಾಮಿ ಕಾರ್ಯದರ್ಶಿಯಾಗಿಯೂ, ಗಂಗಯ್ಯ ಅವರನ್ನು ಸಹ ಕಾರ್ಯದರ್ಶಿಯಾಗಿಯೂ, ಸದಾನಂದಮೂರ್ತಿ ಅವರನ್ನು ಖಜಾಂಚಿಯಾಗಿ ಆರಿಸಲಾಯಿತು.

ಬೆಂಗಳೂರು :

ಆಂಧ್ರ-ಸದರನ್ ಸ್ಟೀಲ್ ಕಾರ್ಮಿಕರಿಗೆ ಬೆಂಬಲ

ಬೆಂಗಳೂರಿನ ಆಂಧ್ರ ಮತ್ತು ಸದರನ್ ಸ್ಟೀಲ್ ಕಾರ್ಮಿಕರು ಕಳೆದ 15 ತಿಂಗಳುಗಳಿಂದಲೂ ತಮ್ಮ ಬೇಡಿಕೆಗಳಿಗಾಗಿ ನಡೆಸುತ್ತಿರುವ ಹೋರಾಟಕ್ಕೆ ಬೆಂಬಲಾರ್ಥವಾಗಿ 30–5–83 ರಿಂದ 6–6–83ರ ವರೆಗೆ ಸಿ. ಐ. ಟಿ. ಯು. ಸಮನ್ವಯ ಸಮಿತಿಯು ಬೇಡಿಕೆ ಸಪ್ತಾಹವನ್ನು ಆಚರಿಸಿತು. ಇದರಲ್ಲಿ 120 ಮಂದಿ ಸಿ.ಐ.ಟಿ.ಯು. ಪ್ರತಿನಿಧಿಗಳು ಫ್ಯಾಕ್ಟರಿಯ ಮುಂದೆ ಧರಣಿ ನಡೆಸಿದರು. 2000 ಕಾರ್ಮಿಕರು ಪ್ರತಿಭಟನಾ ಮೆರವಣಿಗೆಗಳಲ್ಲಿ ಭಾಗವಹಿಸಿದರು.

ಹಳೆ ಮದ್ರಾಸ್ ರಸ್ತೆಯ ಮತ್ತು ವೈಟ್‌ಫೀಲ್ಡ್ ಪ್ರದೇಶಗಳ ಸಿ. ಐ. ಟಿ. ಯು. ಸದಸ್ಯರು ಹೋರಾಟ ನಿಧಿಗೆ 2000 ರೂಪಾಯಿಗಳನ್ನು ಕಾಣಿಕೆಯಾಗಿ ನೀಡಿದ್ದಾರೆ. ಅಲ್ಲದೆ ಉಪವಾಸ ಬಿದ್ದಿರುವ ಕಾರ್ಮಿಕರಿಗಾಗಿ 16 ಚೀಲ ಅಕ್ಕಿಯನ್ನು ಒದಗಿಸಿದ್ದಾರೆ.

15 ತಿಂಗಳುಗಳ ಈ ಕಾರ್ಮಿಕರ ಹೋರಾಟವು ವೈಟ್‌ಫೀಲ್ಡ್ ಮತ್ತು ಸುತ್ತಮುತ್ತಲ ಪ್ರದೇಶಗಳ ಎಲ್ಲಾ ವಿಭಾಗಗಳ ಜನತೆಯ ಬೆಂಬಲವನ್ನು ಗಳಿಸಿಕೊಂಡಿದೆ.

ಬೇಡಿಕೆಸಪ್ತಾಹವು 6-6-83ರಂದು ನಡೆದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಮುಕ್ತಾಯಗೊಂಡಿತು. ಸಭೆಯನ್ನು ಉದ್ದೇಶಿಸಿ ಶಾಸಕರಾದ ಕಾ| ಸೂರ್ಯನಾರಾಯಣರಾವ್, ಕಾ| ಟಿ. ಎಸ್. ಅನಂತರಾಂ, ಕಾ| ಭಾನು, ಕಾ| ಸಿ. ಕುಂಜಪ್ಪನ್ ಮುಂತಾದವರು ಮಾತನಾಡಿದರು.

ಕಾರ್ಮಿಕರ ಸಮಸ್ಯೆಯನ್ನು ಕೂಡಲೇ ಪರಿಹರಿಸಬೇಕೆಂದೂ ಇಲ್ಲವಾದರೆ ಸಿ. ಐ. ಟಿ. ಯು. ಸಮನ್ವಯ ಸಮಿತಿಯು ಎರಡನೇ ಹಂತದ ಹೋರಾಟವನ್ನು ನಡೆಸಬೇಕಾಗುವುದೆಂದೂ ಕಾ| ಸೂರ್ಯನಾರಾಯಣರಾವ್ ಆಡಳಿತ ವರ್ಗಕ್ಕೆ ಎಚ್ಚರಿಕೆ ನೀಡಿದ್ದಾರೆ.

ಮಂಗಳೂರು

ಕೆನರಾ ಬ್ಯಾಂಕ್ ನೌಕರರ ಧರಣಿ ಮುಷ್ಕರ

ಕೆನರಾ ಬ್ಯಾಂಕಿನ ಆಡಳಿತ ವರ್ಗದ ನೌಕರ-ವಿರೋಧೀ ಧೋರಣೆಗೆ ವಿರುದ್ಧವಾದ ಆಡಂಬರದ ಆಕ್ಷೇಪಗಳಲ್ಲಿ ದುಂದುವೆಚ್ಚ ಮಾಡುವುದಕ್ಕೆ ನೌಕರರಿಗೆ ಸರಕಾರ ನಿಗದಿಪಡಿಸಿದ ಸೌಲಭ್ಯಗಳನ್ನು ತಿರಸ್ಕರಿಸುವುದಕ್ಕೆ ಪರಿಶಿಷ್ಟ ಜಾತಿ, ಪಂಗಡ ಹಾಗೂ ಮಾಜಿ ಸೈನಿಕರುಗಳ ಬಗ್ಗೆ ಸರಕಾರದ ನಿರ್ದೇಶನಗಳನ್ನು ಪಾಲಿಸದೆ ಇದ್ದುದಕ್ಕೆ ನೌಕರರ ಸಂಕಷ್ಟಗಳ ಬಗ್ಗೆ ಚರ್ಚಿಸಲು ದ್ವಿಪಕ್ಷೀಯ ಮಾತುಕತೆಗಳನ್ನು ನಡೆಸದುದಕ್ಕೆ ವಿರೋಧವಾಗಿ ಮತ್ತು ಭ್ರಷ್ಟಾಚಾರ ಆರೋಪಕ್ಕೊಳಪಟ್ಟ ಅಧಿಕಾರಿಗಳನ್ನು ಅಮಾನತುಗೊಳಿಸಬೇಕೆಂಬ ಕೋರಿಕೆಗಳನ್ನಿಟ್ಟುಕೊಂಡು ಕೆನರಾ ಬ್ಯಾಂಕ್ ಸ್ಟಾಫ್ ಯೂನಿಯನ್ (ಬಿ. ಇ. ಎಫ್. ಐ) ಕರೆಯಂತೆ ಕೆನರಾ ಬ್ಯಾಂಕಿನ ಮಂಗಳೂರು ವೃತ್ತ ಕಛೇರಿಯ ಮುಂಭಾಗದಲ್ಲಿ ತಾ. 3-6-83ರಂದು ನೌಕರರು ಒಂದು ದಿನದ ಸಾಂಕೇತಿಕ ಧರಣಿ ಮುಷ್ಕರ ನಡೆಸಿದರು.

ಧರಣಿ ಮುಷ್ಕರದಲ್ಲಿ ಭಾಗವಹಿಸಿದ ನೌಕರರಿಗೆ ಶುಭವನ್ನು ಕೋರುತ್ತಾ ವಿಮಾ ನೌಕರರ ಸಂಘಟನೆ (ಎ. ಐ. ಐ. ಇ. ಎ) ಯ ಮುಂದಾಳು ಕಾ। ಬಿ. ಮಾಧವ ಸಿ. ಐ. ಟಿ. ಯು ಜಿಲ್ಲಾ ಕಾರ್ಯದರ್ಶಿ ಕಾ। ಮೂಸಬ್ಬ ಹಾಗೂ ಬೀಡೀ ಲೇಬರ್ ಯೂನಿಯನ್ ಮುಖಂಡ ಕಾ। ಯು. ಬಿ. ಲೋಕಯ್ಯ ಮುಂತಾದವರು ಮಾತನಾಡಿ ತಮ್ಮ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದರು.

ಬೈಲಹೊಂಗಲದಲ್ಲಿ ರೈತರ ಮತಪ್ರದರ್ಶನ

ಜೂನ್ ತಿಂಗಳ ಮೊದಲ ವಾರದಲ್ಲಿ ಬೇಡಿಕೆಯ ಸಪ್ತಾಹವನ್ನು ಆಚರಿಸಲು ಅಖಿಲ ಭಾರತ ಕಿಸಾನ್ ಸಭೆಯು ಕೊಟ್ಟ ಕರೆಯ ಮೇರೆಗೆ ಕರ್ನಾಟಕ ಪ್ರಾಂತ ರೈತ ಸಂಘದ ಸಾಣಿಕೊಪ್ಪ ಗ್ರಾಮ ಘಟಕವು ದಿನಾಂಕ 3-6-83 ರಂದು ಬೈಲಹೊಂಗಲ ತಹಶೀಲದಾರರ ಕಚೇರಿಯ ಎದುರು ಭಾರಿ ಮತಪ್ರದರ್ಶನ ನಡೆಸಿತು. ಕೆಂಬಾವುಟಗಳನ್ನು ಮತ್ತು ತಮ್ಮ ಬೇಡಿಕೆಗಳ ಫಲಕಗಳನ್ನು ಕೈಯಲ್ಲಿ ಹಿಡಿದು ಸಾಣಿಕೊಪ್ಪ ಗ್ರಾಮದಿಂದ ಕಾಲ್ನಡಿಗೆಯಿಂದ ಬಂದ ರೈತರು ದಾರಿಯುದ್ದಕ್ಕೂ ಬಂಡವಾಳಶಾಹಿ ಭೂಮಾಲಿಕ ವ್ಯವಸ್ಥೆಯ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು.

ಮತಪ್ರದರ್ಶನದ ಅಂಗವಾಗಿ ರೈತರ ಸ್ಥಳೀಯ ಹಾಗೂ ಸಾರ್ವತ್ರಿಕ ಬೇಡಿಕೆಗಳನ್ನೊಳಗೊಂಡ ಮನವಿಯೊಂದನ್ನು ತಾಲ್ಲೂಕು ತಹಶೀಲದಾರರಿಗೆ ಸಲ್ಲಿಸಲಾಯಿತು. ಮನವಿಯು, ಸೆಕ್ರೆಟರಿಯ ವಂಚನೆಯಿಂದ ಸ್ಥಗಿತಗೊಂಡಿರುವ ಸಾಣಿಕೊಪ್ಪ ಗ್ರಾಮ ಸಹಕಾರಿ ಸಂಘದ ಅವ್ಯವಹಾರಗಳ ತನಿಖೆಯಾಗಬೇಕು, ಸಾಣಿಕೊಪ್ಪ ಗ್ರಾಮಕ್ಕೆ ಪ್ರತ್ಯೇಕ ಪಂಚಾಯತಿ ಆಗಬೇಕು, ಊರ ಪಕ್ಕದಲ್ಲಿರುವ ಹಳ್ಳಕ್ಕೆ ಸೇತುವೆಯನ್ನು ಕಟ್ಟಬೇಕು, ಕುಡಿಯುವ ನೀರಿಗಾಗಿ ಕೊಳವೆ ಭಾವಿಯನ್ನು ತೋಡಿಸಬೇಕು ಬೀದಿ ದೀಪಗಳ ವ್ಯವಸ್ಥೆಯಾಗಬೇಕು, ಮನೆಗಳಿಲ್ಲದ ಹರಿಜನ ಗಿರಿಜನ ಹಾಗೂ ಇತರ ಬಡವರಿಗೆ ನಿವೇಶನ ಹಾಗೂ ಮನೆಕಟ್ಟಲು ಧನಸಹಾಯ ಒದಗಿಸಬೇಕು, ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ 5ನೆಯ ವರ್ಗವನ್ನು ಪ್ರಾರಂಭಿಸಬೇಕು, ಬೈಲಹೊಂಗಲದಿಂದ ಸಾಣಿಕೊಪ್ಪಕ್ಕೆ ಬಸ್ ದರವನ್ನು ಇಳಿಸಬೇಕು ನಾಗನೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವೈದ್ಯನನ್ನು ನೇಮಿಸಬೇಕು ಸುತಗಟ್ಟಿ, ಭೈರನಟ್ಟಿ, ಕುಮಾರಕೊಳ್ಳ ಗ್ರಾಮಗಳಿಗೆ ಕುಡಿಯುವ ನೀರು, ರಸ್ತೆ ಬೀದಿ ದೀಪ ಹಾಗೂ ಬಸ್ ಸೌಕರ್ಯ ಒದಗಿಸಬೇಕು, ದೇಶನೂರ ನೀರಾವರಿ ಕೆರೆಯನ್ನೂ ಅದರ ಕಾಲುವೆಗಳನ್ನೂ ದುರಸ್ತಿಮಾಡಿಸಬೇಕು, ಹೊಗರ್ತಿ, ಕೊಳ್ಳಾನಟ್ಟಿ ಗ್ರಾಮದ ಭೂಹೀನರಿಗೆ ಸರಕಾರಿ ಬಂಜರು ಭೂಮಿಯನ್ನು ವಿತರಣೆ ಮಾಡಬೇಕು. ಸ್ಥಗಿತಗೊಂಡಿರುವ ತಿಗಡಿ ಹರಿನಾಲಾ ಯೋಜನೆ ಪುನರಾರಂಭಿಸಬೇಕು ಮೊದಲಾದ ಬೇಡಿಕೆಗಳನ್ನೊಳಗೊಂಡಿತ್ತು.

ತಾಲ್ಲೂಕು ತಹಶೀಲದಾರರು ಕೂಡಲೇ ಬಿ.ಡಿ.ಓ. ಮತ್ತು ಇತರ ಅಧಿಕಾರಿಗಳ ಸಭೆ ಸೇರಿಸಿ ಮನವಿಯಲ್ಲಿರುವ ಅಂಶಗಳ ಬಗ್ಗೆ ಚರ್ಚೆ ನಡೆಸಿ ಇನ್ನು ಒಂದು ತಿಂಗಳೊಳಗಾಗಿ ಬೇಡಿಕೆಗಳಲ್ಲಿ ಬಹಳಷ್ಟನ್ನು ಈಡೇರಿಸುವುದಾಗಿ ಭರವಸೆ ಕೊಟ್ಟರು. ಇದಕ್ಕೆ ತಪ್ಪಿದಲ್ಲಿ ಉಪವಾಸ ಸತ್ಯಾಗ್ರಹ ಆರಂಭಿಸುವುದಾಗಿ ರೈತರು ಎಚ್ಚರಿಕೆ ನೀಡಿದರು. ಸಾಣಿಕೊಪ್ಪ ರೈತ ಸಂಘದ ಅಧ್ಯಕ್ಷ ಕಾ॥ ವೀರಭದ್ರಯ್ಯ ಚಿಕ್ಕಮಠ, ಕಾರ್ಯದರ್ಶಿ ಕಾ॥ ಬಸಲಿಂಗಪ್ಪ ಡೊಳ್ಳಿನ್ ಮತಪ್ರದರ್ಶನದ ನೇತೃತ್ವ ವಹಿಸಿದ್ದರು.

ತಹಶೀಲದಾರರ ಕಚೇರಿಯ ಆವರಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಜಿಲ್ಲಾ ಕಾರ್ಯದರ್ಶಿ ಕಾ। ನಿತ್ಯಾನಂದ ಸ್ವಾಮಿಜಿಯವರು, ಸಾಣಿಕೊಪ್ಪದ ರೈತರ ಬೇಡಿಕೆಗಳನ್ನು ಈಡೇರಿಸುವಲ್ಲಿ ಅಧಿಕಾರಿಗಳು ಅನುಸರಿಸುತ್ತಿರುವ ವಿಳಂಬ ನೀತಿಯನ್ನು ಖಂಡಿಸುವ ಜೊತೆಗೆ ತಾಲ್ಲೂಕಿನ ರೈತರು ಹಾಗೂ ಕೂಲಿಕಾರರು ಅಖಿಲ ಭಾರತ ಕಿಸಾನ್ ಸಭೆಯ ಕ್ರಾಂತಿಕಾರಿ ಕೆಂಪು ಧ್ವಜದ ಅಡಿಯಲ್ಲಿ ಸಂಘಟಿತರಾಗಿ ಹೋರಾಟವನ್ನು ತೀವ್ರಗೊಳಿಸಬೇಕೆಂದು ಕರೆ ನೀಡಿದರು.

ಜಿಲ್ಲಾದ್ಯಂತ ಬೀಡಿ ಮಜೂರರ ಪ್ರಚಾರ ಜಾಥಾ

ತಾ॥ 1-6-83ರ ಒಪ್ಪಂದವನ್ನು ಬೀಡಿ ಮಜೂರರಿಗೆ ವಿವರಿಸಿ ಸಂಘಟನೆಯನ್ನು ಬಲಪಡಿಸಲು ನಿರ್ಣಯಿಸಿ ಜಿಲ್ಲಾದ್ಯಂತ 19 ಪ್ರಚಾರ ಜಾಥಗಳನ್ನು ತೆಗೆಯಲು ತಾ॥ 6-6-83 ರಂದು ಸೇರಿದ ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಶನಿನ (ಸಿ. ಐ. ಟಿ. ಯು.) ಸಭೆಯು ನಿರ್ಣಯಿಸಿತ್ತು. ತಾ। 12-6-83ರಿಂದ 14-6-83ರ ತನಕ ಈ ಜಾಥಗಳು ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಸುತ್ತಾಡಿ ತಾ॥ 1-6-83ರಂದು ನಡೆದ ಒಪ್ಪಂದದ ವಿವರವನ್ನು ತಿಳಿಸಿ ಮಜೂರರಿಗೆ ಜಾಗ್ರುತಿಯನ್ನು ಹುಟ್ಟಿಸುವ ಕಾರ್ಯವನ್ನು ಈ ಜಾಥಗಳು ಮಾಡಿದವು. ತಾ॥ 12-6-83ರಂದು ಈ ಜಾಥಗಳನ್ನು ಕಾ। ರಾಮಚಂದ್ರರಾವ್ ಎಂ. ಎಲ್. ಎ. ಇವರು ಬೆಳಿಗ್ಗೆ 9 ಗಂಟೆಗೆ ಮೈದಾನ್ ಆಫೀಸಿನಲ್ಲಿ ಉದ್ಘಾಟಿಸಿದರು.

ಸಾವಿರ ಬೀಡಿಗೆ ರೂ. 1-40 ಹೆಚ್ಚಿಗೆ ಕೊಟ್ಟು ಬೀಡಿಯ ಮಾರಾಟ ದರವನ್ನು ಸಾವಿರಕ್ಕೆ ರೂ. 4ಕ್ಕೂ ಮಿಕ್ಕಿ ಹೆಚ್ಚಿಸಿದ ಮಾಲಿಕರ ನೀತಿಯನ್ನು ಈ ಸಭೆಯು ಖಂಡಿಸಿತು. ದರ ಹೆಚ್ಚಿಸದೆ ಮಜೂರಿ ಕೊಡಲು ಸಾಧ್ಯವಿದೆ ಎಂಬುದನ್ನು ಸಂಘವು ಸಾರ್ವಜನಿಕರಿಗೆ ಹಿಂದೆ ತಿಳಿಸಿತ್ತು.

ರಾಜ್ಯ ಸರ್ಕಾರ ಸಾರಿದ ಚುನಾವಣೆ ದಿನದ ಮಜೂರಿ ಹಾಗೂ ಮೇ ದಿನದ ಮಜೂರಿ ಮಾಲಿಕರು ಬೀಡಿ ಕಾರ್ಮಿಕರಿಗೆ ಕೂಡಲೇ ಕೊಡುವಂತೆ ಸಭೆಯು ತೀವ್ರವಾಗಿ ಒತ್ತಾಯಿಸಿತು.

ಭೂ ಮಾಲಕ ಶಕ್ತಿಗಳ ವಿರುದ್ಧ ಸಂಘಟನೆಗೆ ಕರೆ

"ಭೂಮಾಲಿಕರ ಕ್ರೂರ ದಬ್ಬಾಳಿಕೆಯನ್ನು ಎದುರಿಸಿ ಸೋಲಿಸಲು ಅವರಿಗೆ ಸಿಂಹಸ್ವಪ್ನವಾಗಿರುವ ಕ್ರಾಂತಿಕಾರಿ ಕೆಂಪು ಧ್ವಜದ ಅಡಿಯಲ್ಲಿ ರೈತರು ಹಾಗೂ ಕೂಲಿಕಾರರು ಸಂಘಟಿತರಾಗಬೇಕು" ಎಂದು ಬೆಳಗಾವಿ ಜಿಲ್ಲೆಯ ರೈತ ಸಂಘದ ಕಾರ್ಯದರ್ಶಿ ಕಾ। ನಿತ್ಯಾನಂದಜ ಇಲ್ಲಿ ಕರೆ ನೀಡಿದರು. ಸೋಮವಾರ ದಿನಾಂಕ 6-6-1983ರಂದು ಅವರು ತಲ್ಲೂರಿನಲ್ಲಿ ರೈತ ಹಾಗೂ ಕೂಲಿಕಾರರ ಬೃಹತ್ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಸಭೆಯಲ್ಲಿ ತಲ್ಲೂರು, ಜಾಲಿಕಟ್ಟಿ, ಮದ್ಲೂರು, ಮಬನೂರು, ಬೆನಕಟ್ಟಿ, ಜೀವಾಪುರ, ಆಲದಕಟ್ಟಿ, ಸೋಮಾಪುರ ಹಾಗೂ ರಾಮಾಪುರ ತಾಂಡೆಯ ರೈತರು ಹಾಗೂ ಕೂಲಿಕಾರರು ಭಾಗವಹಿಸಿದ್ದರು.

ಸವದತ್ತಿ ತಾಲ್ಲೂಕಿನ ಈ ಗ್ರಾಮಗಳಲ್ಲಿ ರೈತರು ಇನ್ನೂ ಭೂಮಾಲಿಕ ದೇಸಾಯಿಯವರಿಂದ ಹಿಂಸೆಯನ್ನು ಅನುಭವಿಸುತ್ತಾ ಇದ್ದಾರೆ. ಈ ಜಮೀನುದಾರನ ಹೆಚ್ಚುವರಿ ಭೂಮಿಯನ್ನು ಸರ್ಕಾರ ಭೂಹೀನರಿಗೆ ಕೂಡಲೇ ಹಂಚಬೇಕೆಂದೂ ಸರ್ಕಾರವನ್ನು ಅವರು ಒತ್ತಾಯಿಸಿದರು. ಸಾಣಿಕೊಪ್ಪ ರೈತ ಸಂಘದ ಕಾ। ಬಸಲಿಂಗಯ್ಯ ಮರಕುಂಬಿಮಠ ಇವರೂ ಸಹ ರೈತರನ್ನು ಉದ್ದೇಶಿಸಿ ಮಾತನಾಡಿದರು.

ಬೀಡಿ ಮಜೂರರ ಪ್ರಚಾರ ಜಾಥಾ ಉದ್ಘಾಟನೆ

ಸಿ.ಐ.ಟಿ.ಯು ನೇತೃತ್ವದ ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಶನ್ ಏರ್ಪಡಿಸಿದ ಬೀಡಿಮಜೂರರ ಪ್ರಚಾರ ಜಾಥವನ್ನು ತಾ. 12-6-83 ರಂದು ಸಿ.ಐ.ಟಿ.ಯು ಸಮಿತಿಯ ಕಾರ್ಯದರ್ಶಿ ಉದ್ಘಾಟಿಸುತ್ತಾ, ಮಜೂರ ವರ್ಗದ ಸಂಘಟನೆಗೆ ಇಂತಹ ಪ್ರಚಾರ ಜಾಥಗಳು ಬಹಳ ಅಗತ್ಯ. ಇಂದು ಮಜೂರರ ಸಂಘಟನೆಯನ್ನು ಛಿದ್ರೀಕರಿಸುವ ಶಕ್ತಿಗಳ ವಿರುದ್ಧ ಕಾರ್ಮಿಕರಿಗೆ ವರ್ಗ ಜಾಗೃತಿ ಹಾಗೂ ಸಂಘಟನಾಪ್ರಜ್ಞೆ ಹುಟ್ಟಿಸಬೇಕಾದರೆ ಇಂತಹ ಜಾಥಾಗಳನ್ನು ಸಂಘಟಿಸಬೇಕೆಂದರು. ಇನ್ನು ಕಂಟ್ರಾಕ್ಟ್‌ದಾರರ ಪ್ರಭಾವಕ್ಕೆ ಸಿಕ್ಕಿ ಶೋಷಣೆಗೆ ಒಳಗಾದ ಬೀಡಿ ಮಜೂರರ ಸಂಘಟನೆಯನ್ನು ಬಲಪಡಿಸಲು ಶ್ರಮಿಸುವ ಈ ಜಾಥಕ್ಕೆ ಯಶಸ್ಸು ಕೋರಿದರು. ಪ್ರಾರಂಭದಲ್ಲಿ ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಷನ್ನಿನ ಕಾರ್ಯದರ್ಶಿ ಶ್ರೀ. ಯು. ಬಿ. ಲೋಕಯ್ಯನವರು ಜಾಥಗಳ ಮುಂದಾಳುಗಳನ್ನು ಮತ್ತು ಸ್ವಯಂ ಸೇವಕರನ್ನು ಸ್ವಾಗತಿಸುತ್ತಾ ಜಾಥಗಳನ್ನು ಸಂಘಟಿಸಿದ ಉದ್ದೇಶಗಳನ್ನು ವಿವರಿಸಿದರು.

ಚರಿತ್ರಾರ್ಹ ಘಟನೆ

(ಒಂದನೇ ಪುಟದಿಂದ)

ಜಗತ್ತಿನ ಕಮ್ಯೂನಿಸ್ಟ್ ಪಾರ್ಟಿಗಳೊಳಗೆ, ಬಹಳ ಗಂಭೀರವಾದ ಭಿನ್ನಾಭಿಪ್ರಾಯಗಳಿವೆಯೆಂದು ತಿಳಿದೂ, ಅವರೊಳಗೆ ಐಕ್ಯತೆ, ತಿಳುವಳಿಕೆ ಮತ್ತು ಸಂಬಂಧ ಬೆಳೆಸುವಂಥ ಹೊಸ ಪರಿಸ್ಥಿತಿ ಉಂಟಾಗಿದೆಂಬುದನ್ನು ಎಲ್ಲರೂ ಅರಿತುಕೊಳ್ಳುವುದಗತ್ಯ. ಕಮ್ಯೂನಿಸ್ಟ್ ಪಾರ್ಟಿಗಳೊಳಗಿನ ಭಿನ್ನಾಭಿಪ್ರಾಯ ಅಡ್ಡಿಬಾರದ ರೀತಿಯಲ್ಲಿ ಸೌಹಾರ್ದ ಸಂಬಂಧ ಬೆಳೆಸುವುದು, ಸ್ಥಾಪಿಸುವುದೇ ಹೊಸತಾಗಿದೆಂಬುಧನ್ನು ತಿಳಿಯಬೇಕು. ಈ ತಳಹದಿಯಲ್ಲಿಯೇ ಚೀನಾ, ಇಟಲಿ, ಫ್ರಾನ್ಸ್ ಮೊದಲಾದ ಪಕ್ಷಗಳೊಡನೆ ಸಂಬಂಧ ಸ್ಥಾಪಿಸಲಾಯಿತು. ಚೀನಾ ಪಾರ್ಟಿ ಕೂಡ ಇದೇ ತಿಳುವಳಿಕೆಯಿಂದ ಸಂಬಂಧ ಬೆಳೆಸುವ ಕಾರ್ಯ ಮುಂದುವರಿಸಿದೆ. ಕಮ್ಯೂನಿಸ್ಟ್ ವಿರೋಧಿಗಳು ಭವಿಷ್ಯ ನುಡಿಯುವಂತೆ ಜಗತ್ತಿನ ಕಮ್ಯೂನಿಸ್ಟ್ ಚಳುವಳಿ ಕುಂಠಿತಗೊಳ್ಳದೆ ಅಂತರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯಲ್ಲಿ ಬೆಳೆದು ಬರುತ್ತಿರುವ ಈ ಐಕ್ಯತೆಯ ಮನೋಭಾವನೆ ವರ್ಷಗಳಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಬೆಳೆಯುತ್ತದೆಂಬ ವಿಶ್ವಾಸವನ್ನು ನಾವು ಹೊಂದಿದ್ದೇವೆ.

ಚೀನಾ ಮತ್ತು ಭಾರತದ ಸಿ. ಪಿ. ಐ. (ಎಂ) ಗಳೊಳಗೆ ಸೌಹಾರ್ದ ಸಂಬಂಧ ಸ್ಥಾಪನೆಯಾದರೂ ಕೂಡ, ಜಗತ್ತಿನ ಕಮ್ಯೂನಿಸ್ಟ್ ಪಾರ್ಟಿಗಳೊಳಗೆ, ಗಂಭೀರವಾದ ಒಡಕು, ಭಿನ್ನಾಭಿಪ್ರಾಯಗಳಿರುವುದರಿಂದ, ಇವುಗಳೊಳಗೆ ಐಕ್ಯತೆ ಸಾಧಿಸಲು ಈ ಹಿಂದಿನಕ್ಕಿಂತಲೂ ಮೇಲ್ಪಟ್ಟಿದ್ದ, ಹೊಸ ರೀತಿಯ ಕಷ್ಟಕರವಾದ ಮತ್ತು ತಿಕ್ಷ್ಣ ಪೂರ್ಣವಾದ ಹೋರಾಟ ನಡೆಸುವುದು ಅತ್ಯಗತ್ಯ.

ಕಾರ್ಮಿಕ ವರ್ಗದ ವಿಮೋಚನೆಯು ಅದರ ಹುಟ್ಟುಗುಣದಲ್ಲೇ ಅಂತರಾಷ್ಟ್ರೀಯವಾಗಿದೆಂದೂ, ಜಗತ್ತಿನ ಕಾರ್ಮಿಕರಿಗೆಲ್ಲ ಕಾರ್ಮಿಕರ ಅಂತರಾಷ್ಟ್ರೀಯತೆಯೇ ಮುಖ್ಯ ಮಂತ್ರವಾಗಿರುವುದೆಂದೂ ಸಿ. ಪಿ. ಐ. (ಎಂ) ಮನದಟ್ಟು ಮಾಡಿಕೊಂಡಿದೆ. ಶತಮಾನಗಳ ಸುಲಿಗೆ ಮತ್ತು ಗುಲಾಮಗಿರಿಯಿಂದ ಮಾನವ ಜನಾಂಗದ ವಿಮೋಚನೆಯಾಗಬೇಕಾದರೆ ಶ್ರಮಜೀವಿ ವರ್ಗದ ಅಂತಿಮ ಹೋರಾಟದಲ್ಲಿ ಜಗತ್ತಿನ ಕಮ್ಯೂನಿಸ್ಟ್ ಹಾಗೂ ವರ್ಕರ್ಸ್ ಪಕ್ಷಗಳೆಲ್ಲ, ತಂತಮ್ಮೊಳಗಿನ ಅನುಭವ ಪಡೆಯಬೇಕು. ಒಬ್ಬರಿಗೊಬ್ಬರು ಸಹಾಯ ಮಾಡಬೇಕು. ಮತ್ತು ಒಗ್ಗಟ್ಟಾಗಿ ನಿಲ್ಲಬೇಕು.

ಸಿ.ಐ.ಟಿ.ಯು. ಸಂಘದ ಉದ್ಘಾಟನೆ

ದಿನಾಂಕ 4-6-1983ರ ಸಂಜೆ 5-30 ಘಂಟೆಗೆ ಮಲ್ಲೇಶ್ವರಂ ಮತ್ತು ಇತರ ವಿಭಾಗದಲ್ಲಿರುವ ಹಿಂದೂಜಾ ಗಾರ್ಮೆಂಟ್ಸ್‌ನಲ್ಲಿರುವ 1500 ಕಾರ್ಮಿಕರು ಒಟ್ಟು ಮೊದಲಿಗೆ ಸಿ. ಐ. ಟಿ. ಯು ಆಶ್ರಯದಲ್ಲಿ ಸಂಘವನ್ನು ಕಟ್ಟಿದರು. ಸಂಘದ ಉದ್ಘಾಟನಾ ಸಮಾರಂಭವನ್ನು ರಾಜ್ಯದ ಸಿ. ಐ. ಟಿ. ಯು. ಅಧ್ಯಕ್ಷ ಹಾಗೂ ಶಾಸಕ ಕಾ। ಸೂರ್ಯನಾರಾಯಣರಾವ್ ನೆರವೇರಿಸಿದರು.

ಸಭೆಯನ್ನು ಉದ್ದೇಶಿಸಿ ಕಾ। ಜಾನ್‌ವಿನ್ಸೆಂಟ್ ಹಾಗೂ ಕೆ. ವಿ. ಶ್ರೀನಿವಾಸ್ ಹಾಗೂ ಕಾ। ಎ. ವಿ. ರಮೇಶರವರು ಮಾತನಾಡಿ ಗಾರ್ಮೆಂಟ್ ಕಾರ್ಮಿಕರ ಬೇಡಿಕೆಗಳಿಗೆ ಬೆಂಬಲ ವ್ಯಕ್ತಪಡಿಸಿದ್ದರು.

ಕಾ। ಪಿ. ಕೆ. ಸುಬ್ರಮಣಿ ಅವರು ಅಧ್ಯಕ್ಷತೆ ವಹಿಸಿದ್ದರು, ಪ್ರಧಾನ ಕಾರ್ಯದರ್ಶಿ ಕಾ। ಎಸ್. ಸಡಗೋಪನ್ ಅವರು ವಂದನಾರ್ಪಣೆ ಮಾಡಿದರು. ಸಂಘವು ಈ ಕೆಳಕಂಡ ಪದಾಧಿಕಾರಿಗಳನ್ನು ಚುನಾಯಿಸಿತು.

ಸೂರ್ಯನಾರಾಯಣರಾವ್ (ಅಧ್ಯಕ್ಷರು) ಪಿ. ಕೆ. ಸುಬ್ರಮಣಿ (ಕಾರ್ಯಾಧ್ಯಕ್ಷರು) ಕೆ. ವಿ. ಶ್ರೀನಿವಾಸನ್ ಹಾಗೂ ಟಿ. ಸ್ಟೀಫನ್ (ಉಪಾಧ್ಯಕ್ಷರು) ಎಸ್. ಸಡಗೋಪನ್ (ಪ್ರಧಾನ ಕಾರ್ಯದರ್ಶಿ) ಎಸ್ ಶಿವಮಣಿ ಹಾಗೂ ಗೋಧಾವರಿ (ಸಹ ಕಾರ್ಯದರ್ಶಿ) ಎಸ್. ಪುರುಷೋತ್ತಮನ್ ಹಾಗೂ ನಾಗರಾಜ್ (ಸಂಘಟನಾ ಕಾರ್ಯದರ್ಶಿ) ಬಾಲಾಜಿಸಿಂಗ್ ಹಾಗೂ ಪದ್ಮ (ಜಂಟಿ ಕಾರ್ಯದರ್ಶಿ) ಅಶ್ವತ್ಥನಾರಾಯಣ (ಖಜಾಂಚಿ).

ಮತ್ತು ಇತರೆ 14 ಜನ ಇರುವ ಕಾರ್ಯಕಾರಿ ಸಮಿತಿಯನ್ನು ಸಭೆ ಚುನಾಯಿಸಿತು.

ಉಡುಪಿಯಲ್ಲಿ
ಕಾರ್ಮಿಕ ವರ್ಗದ ರಾಷ್ಟ್ರೀಯ ಐಕ್ಯತಾ ದಿನ

ರಾಷ್ಟ್ರೀಯ ಚಳುವಳಿ ಸಮಿತಿಯು ದಿನಾಂಕ 4-6-83ರಂದು ಐಕ್ಯದಿನವನ್ನು ಆಚರಿಸಬೇಕೆಂದು ನೀಡಿದ ಕರೆಯಂತೆ ಉಡುಪಿಯಲ್ಲಿ ಈ ದಿನವನ್ನು ಆಚರಿಸಲಾಯಿತು. ಕಾರ್ಮಿಕ ಕ್ರಿಯಾ ವೇದಿಕೆಗೆ ಸೇರಿದ್ದ ಎಲ್ಲಾ ಕಾರ್ಮಿಕ ಸಂಘಗಳು ಇದರಲ್ಲಿ ಪಾಲ್ಗೊಂಡು ದೊಡ್ಡ ಸಂಖ್ಯೆಯಲ್ಲಿ ತಹಶೀಲ್ದಾರರಲ್ಲಿಗೆ ತೆರಳಿ ಮನವಿ ಒಪ್ಪಿಸಲಾಯಿತು. ಮನವಿಯಲ್ಲಿ ಬೆಲೆ ಏರಿಕೆಯನ್ನು ತಡೆಯಬೇಕು ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಕಡಿಮೆ ದರದಲ್ಲಿ ಅವಶ್ಯಕ ವಸ್ತುಗಳನ್ನು ವಿತರಿಸಬೇಕು. ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಲೆ ನಿರ್ಧರಿಸಬೇಕು. 15ನೇ ಭಾರತೀಯ ಕಾರ್ಮಿಕ ಸಮಾವೇಶದ ತೀರ್ಮಾನದಂತೆ ಅಗತ್ಯ ಆಧಾರಿತ ಕನಿಷ್ಠ ವೇತನ ನಿಗದಿಗೊಳಿಸತಕ್ಕದ್ದು ತುಟ್ಟಿಭತ್ಯೆಯನ್ನು ಬೆಲೆ ಏರಿಕೆಗೆ ಅನುಗುಣವಾಗಿ ನಿರ್ಧರಿಸಿ ಪಾವತಿ ಮಾಡಬೇಕೆಂದು ಯಾವುದೇ ಮಿತಿ ಇಲ್ಲದೆ ಎಲ್ಲ ಕಾರ್ಮಿಕ ನೌಕರರಿಗೆ ಬೋನಸ್ಸು ಕೊಡಬೇಕು. ಕೈಗಾರಿಕೆ ಮುಚ್ಚುವುದನ್ನು ಪ್ರತಿಬಂಧಿಸಿ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡುವುದನ್ನು ನಿಲ್ಲಿಸಬೇಕು ನಿರುದ್ಯೋಗಿಗಳಿಗೆ ಭತ್ಯೆ ಕೊಡಬೇಕು. ಕಾರ್ಮಿಕ ಸಂಘಟನೆಗಳ ಸಾಮೂಹಿಕ ಚೌಕಾಶಿ ಹಕ್ಕನ್ನು ಸಂಪೂರ್ಣವಾಗಿ ರಕ್ಷಿಸಬೇಕು ಮತ್ತು ಸಂಘಟನೆಗಳ ಇತರ ಹಕ್ಕುಗಳನ್ನು ಮಾನ್ಯ ಮಾಡಬೇಕು. ರಾಷ್ಟ್ರೀಯ ಭದ್ರತಾ ಶಾಸನ, ಅವಶ್ಯಕ ಸೇವಾ ನಿರ್ವಹಣಾ ಶಾಸನ ಮತ್ತು ಇತರ ಕರಾಳ ಕಾಯಿದೆಗಳನ್ನು ರದ್ದುಗೊಳಿ[ಸ]ಬೇಕೆಂದು ಮನವಿಯಲ್ಲಿ ಸರಕಾರವನ್ನು ಒತ್ತಾಯಿಸಲಾಗಿತ್ತು.

ನಂತರ ತಾಲ್ಲೂಕು ಕಚೇರಿ ಬ[ಳಿ]ಯಿಂದ ಹೊರಟ ಬೃಹತ್ ಮೆರವಣಿಗೆಯು ಉಡುಪಿ ನಗರ ಸಭೆಯ ಸತ್ಯಮೂರ್ತಿ ಸಭಾ ಭವನದಲ್ಲಿ ಸಾರ್ವಜನಿಕ ಸಭೆಯು ಕಾ॥ ಬಿ. ಆರ್. ವಿ. ಕಾಮತ್‌ರ (ವಿಮಾ ನೌಕರರ ಸಂಘದ ಅಧ್ಯಕ್ಷರು) ಅಧ್ಯಕ್ಷತೆಯಲ್ಲಿ ಜರಗಿತು.

ಪ್ರಾರಂಭದಲ್ಲಿ ಕಾ॥ ವಿಶ್ವನಾಥ ರಾ[ವ್]ಯವರು ಸ್ವಾಗತ ಭಾಷಣ ಮಾ[ಡಿ] ಎನ್.ಸಿ.ಸಿ. ರಾಷ್ಟ್ರೀಯ ಚಳುವಳಿ ಸಮಿತಿಯ ಕೇಳಿಕೆಗಳಡಿಯಲ್ಲಿ ಕಾರ್ಮಿಕರ ವಿಶಾಲ ಐಕ್ಯ ಚಳುವಳಿಯನ್ನು ಬೆಳೆಸಬೇಕೆಂದು ಕರೆ ನೀಡಿದರು. ಸ[ಭೆ]ಯಲ್ಲಿ ಶ್ರೀಗಳಾದಎಂ.ಆರ್. ಆಚಾರ್ಯ, ರಮೇಶರಾವ್, ನಿತ್ಯಾನಂ[ದ] ರಾವ್, ಎನ್. ವಿಶ್ವನಾಥ ಕಾಮತ್, ಶಂಕರ ಎಸ್. ಶೆಟ್ಟಿಗಾರ್, ದೇವಿದಾ[ಸ್] ಎ. ಕರ್ಕಡ ಮೊದಲಾದವರು ಮಾ[ತ]ನಾಡಿ ಬೆಂಬಲ ಸೂಚಿಸಿದರು.

ಕೊನೆಯಲ್ಲಿ ಕಾ॥ ಎಸ್. ಎಸ್. ತೊನ್ಸೆಯವರು ಧನ್ಯವಾದ ಸಲ್ಲಿಸಿದ[ರು].

ಐಕ್ಯರಂಗಕ್ಕೆ ಚಂದಾದಾರರಾಗಿರಿ

ಹುಬ್ಬಳ್ಳಿ :
ಪೋಲೀಸ್ ದಬ್ಬಾಳಿಕೆ ವಿರುದ್ಧ ಪ್ರದರ್ಶನ

ದಿನಾಂಕ 30-5-83ರಂದು ರಾತ್ರಿ 10 ಗಂಟೆಗೆ ಸುಮಾರು 250 ಬಂದೂಕುಧಾರಿ ಪೋಲಿಸರು ಮುಷ್ಕರ ನಿರತ ಬಿ. ಡಿ. ಕೆ. ಅಲಾಯ್ ಕಾರ್ಮಿಕರ ಟೆಂಟನ್ನು (ಡೇರೆ) ಕಿತ್ತೊಗೆದು [?] ಹಾಕಿ ಆಡಳಿತ ವರ್ಗದವರು ಫ್ಯಾಕ್ಟರಿಯೊಳಗಿನಿಂದ ಸರಕುಗಳನ್ನು ಟ್ರಕ್ಕುಗಳ ಮೂಲಕ ಹೊರಗೆ ಸಾಗಿಸಲು ಅವಕಾಶ ಮಾಡಿಕೊಟ್ಟರು. ಸುದ್ದಿ ತಿಳಿದ ಕೂಡಲೇ ಸಂಘದ ಪ್ರಧಾನ ಕಾರ್ಯದರ್ಶಿ ಕಾ। ವ್ಹಿ.ಎಂ. ಪೂಜಾರಿ ಅವರನ್ನೊಳಗೊಂಡು ಅನೇಕ ಕಾರ್ಮಿಕರು ಸ್ಥಳಕ್ಕೆ ಧಾವಿಸಿ ಡಿ.ವೈ.ಎಸ್.ಪಿ.ಯವರೊಂದಿಗೆ ಮಾತನಾಡಿ ಈ ಕ್ರಮವನ್ನು ವಿರೋಧಿಸಿದರು. ಹೊರಗೆ ಒಯ್ಯಲಾಗುತ್ತಿದ್ದ ಸರಕುಗಳಲ್ಲಿ ಕ್ಯಾಸ್ಟಿಂಗ್ಸ್‌ಗಳಲ್ಲದೇ ಪ್ಯಾಟರ್ನುಗಳೂ (ಪಡಿಯಚ್ಚುಗಳೂ) ಇದ್ದದ್ದರಿಂದ ಅವುಗಳನ್ನುಪಯೋಗಿಸಿ ಹೊರಗಡೆ ಬೇರೆ ಫೌಂಡ್ರಿಯಲ್ಲಿ ಉತ್ಪಾದನೆ ನಡೆಸುವ ಹೊಂಚು ಅಡಕವಾಗಿದೆಯೆಂದು ಕಾರ್ಮಿಕ ಸಂಗಾತಿಗಳು ಹೇಳಿದರೂ ಪೋಲೀಸರು ದರ್ಪದಿಂದ ವರ್ತಿಸಿದಾಗ ಕಾರ್ಮಿಕರೆಲ್ಲರೂ ಟ್ರಕ್ಕುಗಳಿಗೆ ಅಡ್ಡವಾಗಿ ಮಲಗಿ ಬಿಟ್ಟರು. ಆಗ ಪೋಲೀಸರು ಒಟ್ಟು 58 ಕಾರ್ಮಿಕರನ್ನು ಬಂಧಿಸಿ ಲಾಕಪ್ಪಿಗೆ ಒಯ್ದರು. ಅಲ್ಲಿ ರಾತ್ರಿಯಿಡೀ ಅವರಿಗೆ ಯಾವುದೇ ಉಪಚಾರ ನೀಡದೇ ತುಂಬಾ ಉಪಟಳ ಕೊಡಲಾಯಿತು. ಮರು ದಿನ ಕೋರ್ಟಿನಲ್ಲಿ ಅವರ ಮೇಲೆ ಕೇಸುಗಳನ್ನು ದಾಖಲುಗೊಳಿಸಿದ ಮೇಲೆಯೇ ಅವರನ್ನು ಬಿಡುಗಡೆ ಮಾಡಲಾಯಿತು. ಪೋಲೀಸರ ಈ ನಗ್ನ ಸ್ವರೂಪದ ಮಾಲಿಕ ವರ್ಗದ ಪರ ಕ್ರಮವನ್ನು ಪ್ರತಿಭಟಿಸಲು ದಿನಾಂಕ 31ರಂದು ಸಂಜೆ ಸಿ. ಐ. ಟಿ. ಯು. ನೇತೃತ್ವದ ಜಂಟೀ ಕ್ರಿಯಾ ಸಮಿತಿಯ ಆಶ್ರಯದಲ್ಲಿ ಬೃಹತ್ ಮತ ಪ್ರದರ್ಶನ ನಡೆಸಲಾಯಿತು. ಮೂರೇ ದಿನಗಳ ಹಿಂದೆ ಸಿ. ಐ. ಟಿ. ಯು. ನೇತೃತ್ವ[ದ] ಬೃಹತ್ ಮೆರವಣಿಗೆಯನ್ನು ವಿ[...] ಸಿದ್ದ ಹುಬ್ಬಳ್ಳಿಯ ನಾಗರಿಕರು ಇಂ[...] ಅದಕ್ಕಿಂತಲೂ ದೊಡ್ಡದಾದ, ಉ[...] ವಾದ ದೃಶ್ಯವನ್ನು ಕಂಡರು. ಸುಮಾರು ಒಂದು ಗಂಟೆಯವ[ರೆಗೆ] ನಗರದಲ್ಲಿಯ ಪ್ರಮುಖ ಪೂನಾ-ಬೆಂಗಳೂರು ಹೆದ್ದಾರಿಯಲ್ಲಿ ಸಾ[ರಿ]ಗೆಯು ಸಂಪೂರ್ಣವಾಗಿ ಸ್ಥಗಿತಗೊಂ[]ಡಿತ್ತು. ಪೋಲೀಸ್ ಸ್ಟೇಷ[ನ್] ಎದುರು ಮತ ಪ್ರದರ್ಶನ ನಡೆ[ಸಿದ] ಬಳಿಕ ಈದಗಾ ಮೈದಾನದಲ್ಲಿಯ [...] ರಂಗ ಸಭೆಯಲ್ಲಿ ಕಾ। ಎಂ. ಬಿ. ಕ[...] ಕಾ। ಸುಧೀಂದ್ರ, ಕಾ। ವ್ಹಿ. [...] ಪೂಜಾರ, ಕಾ। ಚಿದಾನಂದ, ಶಿರಪೂರ ಹಾಗೂ ಇತರ ಹಲವ[ು] ಸಂಗಾತಿಗಳು ಪೋಲೀಸ್ ದಬ್ಬಾ[ಳಿಕೆ]ಯನ್ನು ಖಂಡಿಸಿ ಮಾತನಾಡಿದ[ರು]. ಕೊನೆಯಲ್ಲಿ ಅಡಿಷನಲ್ ಎಸ್.[ಪಿ.] ಸುರೇಶಬಾಬು ಅವರನ್ನು ಕ[...] ಮನವಿ ಸಲ್ಲಿಸಲಾಯಿತು.

Printed & Published by P. Ramachandra Rao by him on behalf of the Communist Party of India (Marxist) Karnataka State Committee L-56 K. V. Temple Street Sultanpet, Bangalore 560053. Editorial and managerial office : L-56, K. V. Temple Street, Sultanpet, B-53. Phone : 24[...]
Printed at Karnataka Pressmen Associates (P) Limited, 54/1, K. R. Road, Bangalore-4 Editor: P. RAMACHANDRA RAO